ಸ್ಥಾಪನೆ : 16-06-1974
ನೋಂದಣಿ : 18-02-1975
ಸಂಖ್ಯೆ : 469/74/75

# ಅರಸು ಅಸೋಸಿಯೇಷನ್ (ರಿ.)

ನಂ. 8, ಡಿ. ದೇವರಾಜೇ ಅರಸು ಭವನ, ಮಿಲ್ಲರ್ ಕೆರೆ, ಜಸ್ಮಾದೇವಿ ಭವನ ರಸ್ತೆ,
ವಸಂತನಗರ, ಬೆಂಗಳೂರು-560052




## 51ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ
## ಆಹ್ವಾನ ಪತ್ರಿಕೆ

ದಿನಾಂಕ : 02-11-2025ನೇ ಭಾನುವಾರ
ಬೆಳಿಗ್ಗೆ 10-00 ಗಂಟೆಗೆ

# 2024-2025ನೇ ಸಾಲಿನ ವಾರ್ಷಿಕ ವರದಿ

# ಆಡಳಿತ ಮಂಡಲಿ ಸದಸ್ಯರು



**ಶ್ರೀ ಸುಬ್ರಹ್ಮಣ್ಯ ಎನ್.ಜಿ.**
ಅಧ್ಯಕ್ಷರು



**ಶ್ರೀ ಎನ್. ಆರ್. ಅಶೋಕ್ ಅರಸ್**
ಉಪಾಧ್ಯಕ್ಷರು



**ಶ್ರೀ ಕೆ.ವಿ. ವಿಲಾಸ್ ಅರಸ್**
ಉಪಾಧ್ಯಕ್ಷರು



**ಶ್ರೀ ಎಲ್. ಶ್ರೀಕಾಂತ್ ರಾಜ್ ಅರಸ್**
ಗೌ॥ ಕಾರ್ಯದರ್ಶಿ



**ಶ್ರೀ ಎಲ್. ಪ್ರಭುರಾಜೇ ಅರಸ್**
ಜಂಟಿ ಕಾರ್ಯದರ್ಶಿ



**ಶ್ರೀ ಬಿ.ಎಸ್. ನಾಗೇಂದ್ರ ರಾಜ್ ಅರಸ್**
ಜಂಟಿ ಕಾರ್ಯದರ್ಶಿ



**ಡಾ. ಎಲ್. ದೇವರಾಜ್ ಅರಸ್**
ಖಜಾಂಚಿ



**ಶ್ರೀ ಎಂ.ಸಿ. ನಂಜುಂಡ ರಾಜ್ ಅರಸ್**
ನಿರ್ದೇಶಕರು



**ಶ್ರೀ ಡಿ. ಉದಯ್ ಭಾಸ್ಕರ್ ಅರಸ್**
ನಿರ್ದೇಶಕರು



**ಡಾ. ಬಿ. ಪಂಪಾದೇವಿ**
ನಿರ್ದೇಶಕರು



**ಶ್ರೀಮತಿ ಎಸ್. ನಾಗನಂದಿನಿ**
ನಿರ್ದೇಶಕರು



**ಶ್ರೀ ಹೆಚ್.ಎಲ್. ಕಿರಣ್**
ನಿರ್ದೇಶಕರು



**ಶ್ರೀ ಕೆ.ಎಂ. ಸುನಿಲ್**
ನಿರ್ದೇಶಕರು

**ಅರಸು ಅಸೋಸಿಯೇಷನ್ (ರಿ.)**

**ನೋಂದಣಿ ಸಂಖ್ಯೆ : 469/74/75**

**ನಂ. 8, ಡಿ. ದೇವರಾಜೇ ಅರಸು ಭವನ, ಮಿಲ್ಲರ್ ಕೆರೆ, ಜಸ್ಮಾದೇವಿ ಭವನ ರಸ್ತೆ,**
**ವಸಂತನಗರ, ಬೆಂಗಳೂರು–560052**

ಮಾನ್ಯರೇ,

ನಮ್ಮ ಅರಸು ಅಸೋಸಿಯೇಷನ್ ತನ್ನ 50 ವರ್ಷಗಳ ಮಹತ್ವದ ಪಯಣವನ್ನು ಪೂರೈಸಿದ ಸಂತಸದ ಕ್ಷಣದಲ್ಲಿ, ಸುವರ್ಣ ಮಹೋತ್ಸವವನ್ನು ಯಶಸ್ವಿಯಾಗಿ ಆಯೋಜಿಸಲು ತಾವು ನೀಡಿದ ಸಹಕಾರ ಅತ್ಯಮೂಲ್ಯವಾಗಿದೆ. ಈ ಸಮಾರಂಭವನ್ನು ಯಶಸ್ವಿಗೊಳಿಸಲು ತಮ್ಮ ಸಹಾಯ ಹಸ್ತವನ್ನು ನೀಡಿದ ಹಾಗೂ ಸಮಾರಂಭದಲ್ಲಿ ಭಾಗಿಯಾಗಿ ಸಮಾರಂಭವನ್ನು ಯಶಸ್ವಿಗೊಳಿಸಲು ಸಹಕರಿಸಿದ ಸದ್ಯಸರುಗಳಿಗೂ ಹಾಗೂ ಅರಸು ಕುಲಬಾಂಧವರಿಗೂ ನಮ್ಮ ಕಾರ್ಯಕಾರಿ ಸಮಿತಿಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ನಿಮ್ಮ ಉದಾರ ಸಹಾಯ ಕಾರ್ಯಕ್ರಮದ ವೈಭವವನ್ನು ಹೆಚ್ಚಿಸುವುದರೊಂದಿಗೆ, ಸಾಮಾಜಿಕ ಚಟುವಟಿಕೆಗಳಿಗೆ ಇನ್ನಷ್ಟು ಬಲವರ್ಧನೆ ದೊರೆತಿದೆ. ಸಮುದಾಯದ ಒಗ್ಗಟ್ಟು, ಸಂಸ್ಕೃತಿ ಮತ್ತು ಬಾಂಧವ್ಯವನ್ನು ಇನ್ನಷ್ಟು ಬಲಪಡಿಸಲು ಕಾರಣವಾಗಿದೆ. ಇಂತಹ ಪ್ರೋತ್ಸಾಹ ಮತ್ತು ಬೆಂಬಲವು ಈ ಮುಂದೆಯು ಇರಲಿ ಎಂದು ಹಾರೈಸುತ್ತೇವೆ.

ವಂದನೆಗಳೊಂದಿಗೆ,

ಕಾರ್ಯಕಾರಿ ಸಮಿತಿಯ ಪರವಾಗಿ
ಸಹಿ/–
**(ಸುಬ್ರಮಣ್ಯ. ಎನ್. ಜಿ)**
ಅಧ್ಯಕ್ಷರು

# ಅರಸು ಅಸೋಸಿಯೇಷನ್ (ರಿ.)

**ನೋಂದಣಿ ಸಂಖ್ಯೆ : 469/74/75**

**ನಂ. 8, ಡಿ. ದೇವರಾಜೇ ಅರಸು ಭವನ, ಮಿಲ್ಲರ್ ಕೆರೆ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052**

## 51 ನೇ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರ

**ಸನ್ಮಾನ್ಯ ಸದಸ್ಯರೇ,**

ಅರಸು ಅಸೋಸಿಯೇಷನ್ (ರಿ) ಇದರ 2024–2025 ನೇ ಸಾಲಿನ ವಾರ್ಷಿಕ ಸರ್ವ ಸದ್ಯಸರ ಸಭೆಯನ್ನು ಅಧ್ಯಕ್ಷರಾದ ಶ್ರೀ. ಸುಬ್ರಮಣ್ಯ ಎನ್.ಜಿ. ರವರ ಅಧ್ಯಕ್ಷತೆಯಲ್ಲಿ ದಿನಾಂಕ : 02–11–2025ನೇ ಭಾನುವಾರ ಬೆಳಿಗ್ಗೆ 10–00 ಗಂಟೆಗೆ ಅಸೋಸಿಯೇಷನ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸದ್ಯಸರೆಲ್ಲರೂ ಸಕಾಲಕ್ಕೆ ಬಂದು ಸಕ್ರಿಯವಾಗಿ ಭಾಗವಹಿಸಿ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ.

**ವಿಷಯಗಳು**

1. ಪ್ರಾರ್ಥನೆ ಹಾಗೂ ಸಂಸ್ಥಾನ ಗೀತೆ
2. ಸ್ವಾಗತ ಭಾಷಣ
3. ಶ್ರದ್ಧಾಂಜಲಿ
4. ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರದ ದೃಡೀಕರಣ.
5. 2023–24 ನೇ ಸಾಲಿನ ಸರ್ವಸದಸ್ಯರ ಸಭೆಯ ನಡಾವಳಿಯ ಮಂಡನೆ ಹಾಗೂ ಅನುಮೋದನೆ
6. 2024–25 ನೇ ಸಾಲಿನ ಆಡಳಿತ ವರದಿ ಹಾಗೂ ಮಂಡನೆ
7. 2024–25 ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರ ಗಳ ಮಂಡನೆ ಹಾಗೂ ಅನುಮೋದನೆ.
8. 2025–26 ನೇ ಸಾಲಿನ ವಾರ್ಷಿಕ ಮುಂಗಡ ಪತ್ರದ ಮಂಡನೆ ಹಾಗೂ ಅನುಮೋದನೆ.
9. 2025–2026 ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ಮರು ನೇಮಕ ಮಾಡಿಕೊಳ್ಳುವ ಕುರಿತು ಅನುಮೋದನೆ.
10. ಅಸೋಸಿಯೇಷನ್ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಸುಸಮಯದಲ್ಲಿ ಸದ್ಯಸತ್ವ ಶುಲ್ಕವನ್ನು ದಿನಾಂಕ 02.11.2025 ರಿಂದ 02.12.2025 ರವರಿಗೆ ರಿಯಾಯಿತಿ ದರದಲ್ಲಿ ಅಂದರೆ ರೂ.1000/– ಬದಲಾಗಿ ರೂ. 500/– ಗಳಿಗೆ ಮಾಡುವ ಬಗ್ಗೆ.
11. ಅಸೋಸಿಯೇಷನ್‌ನ ಆರ್ಥಿಕ ಸುಧಾರಣೆ, ಅಸೋಸಿಯೇಷನ್ ಕಟ್ಟಡವನ್ನು ನವೀಕರಣ ಮತ್ತು ಅಭಿವೃದ್ಧಿ ಬಗ್ಗೆ.
12. ಸದ್ಯಸರಿಂದ ಬಂದ ಪತ್ರಗಳ ಮಂಡನೆ.
13. ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರೆ ವಿಷಯಗಳು.
14. ಅಧ್ಯಕ್ಷರ ಭಾಷಣ.
15. ವಂದನಾರ್ಪಣೆ.

ಕಾರ್ಯಕಾರಿ ಸಮಿತಿ ಪರವಾಗಿ

ಸ್ಥಳ : ಬೆಂಗಳೂರು

ಸಹಿ/–

ದಿನಾಂಕ : 19–09–2025

**(ಶ್ರೀ. ಎಲ್. ಶ್ರೀಕಾಂತ್ ರಾಜ್ ಅರಸು)**

ಗೌ॥ ಕಾರ್ಯದರ್ಶಿ

## ವಿಶೇಷ ಸೂಚನೆಗಳು

1. ಸದ್ಯಸರು ಸಭೆಗೆ ಬಂದೊಡನೆ ಖಡ್ಡಾಯವಾಗಿ ಹಾಜರಿ ಪುಸ್ತಕದಲ್ಲಿ ಸಹಿ ಮಾಡುವುದು.

2. ಸಭೆಯಲ್ಲಿ ಅಸೋಸಿಯೇಷನ್‌ನಲ್ಲಿ ಸದ್ಯಸರಾಗಿರುವವರು ಮಾತ್ರ ಭಾಗವಹಿಸುವುದು.

3. ಕೊರಂ (ಕನಿಷ್ಠ ಸದ್ಯಸರ ಸಂಖ್ಯೆ) ಇಲ್ಲದಿದ್ದಲ್ಲಿ ಸಭೆಯನ್ನು 30 ನಿಮಿಷಗಳ ಕಾಲ ಮುಂದೂಡಿ ನಂತರ ನಡೆಸಲಾಗುವುದು.

4. ಮಹಾಸಭೆಯಲ್ಲಿ ಸೂಚನೆ, ಸಲಹೆ ಮತ್ತು ಪ್ರಸ್ತಾವನೆ ಮಂಡಿಸಲಿಚ್ಛಿಸುವ ಸದ್ಯಸರು ಹಾಗೂ ಲೆಕ್ಕ ಪತ್ರಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ / ವಿವರಗಳು / ಸಮಜಾಯಿಸಿಯನ್ನು ಕೇಳುವುದಿದ್ದಲ್ಲಿ, 7 ದಿನಗಳ ಮುಂಚಿತವಾಗಿ ಲಿಖಿತ ರೂಪದಲ್ಲಿ ಅಸೋಸಿಯೇಷನ್ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕವಾಗಲಿ ಅಥವಾ ಇ–ಮೇಲ್ (secretary@ursuassoication.com) ಮುಖಾಂತರವಾಗಲಿ ತಿಳಿಸುವುದು. ನಂತರ ಬಂದ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

5. ಈ ವರದಿಯನ್ನು ಸದ್ಯಸರು ಸಭೆಗೆ ತಮ್ಮೊಂದಿಗೆ ತರಬೇಕಾಗಿ ಕೋರಿದೆ.

6. ಸದ್ಯಸರು ತಮ್ಮ ವಿಳಾಸದಲ್ಲಿ ಮೊಬೈಲ್ ನಂಬರ್ ಬದಲಾವಣೆ ಇದ್ದಲ್ಲಿ. ಈ ವರದಿಯೊಂದಿಗೆ ಲಗತ್ತಿಸಿರುವ ನಮೂನೆ–1 ನ್ನು ಭರ್ತಿಮಾಡಿ ಅಸೋಸಿಯೇಷನ್ ಕಛೇರಿಗೆ ಖುದ್ದಾಗಿಯಾಗಲೀ, ಅಂಚೆಯ ಮೂಲಕವಾಗಲೀ ಅಥವಾ ಇ–ಮೇಲ್ ಮುಖಾಂತರವಾಗಲೀ ಸಲ್ಲಿಸತಕ್ಕದ್ದು.

7. ಸದ್ಯಸರು ನಿಧನ ಹೊಂದಿದ ಸಂದರ್ಭದಲ್ಲಿ ಅವರ ಕುಟುಂಬದ ಸದ್ಯಸರು ದಯಮಾಡಿ ಸದ್ಯಸರ ನಿಧನದ ವಿಷಯವನ್ನು ಅಸೋಸಿಯೇಷನ್‌ಗೆ ತಿಳಿಸುವುದು. ಮಾಹಿತಿಯ ಅಲಭ್ಯತೆಯಿಂದ ಮಾನ್ಯ ಸದ್ಯಸರಿಗೆ ಶ್ರದ್ಧಾಂಜಲಿ ಅರ್ಪಿಸುವುದು ಕಷ್ಟವಾಗುತ್ತದೆ.

8. ಆನ್‌ಲೈನ್‌ನಲ್ಲಿ 2024–25ನೇ ಸಾಲಿನ ಆಡಳಿತ ವರದಿಯು www.ursuassociation.com ಈ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

# ಶ್ರದ್ಧಾಂಜಲಿ

**2024–25ನೇ ಸಾಲಿನಲ್ಲಿ ನಿಧನ ಹೊಂದಿದ ಸದಸ್ಯರ ಪಟ್ಟಿ**

| ಕ್ರಮ ಸಂಖ್ಯೆ | ಸದಸ್ಯರ ಸದಸ್ಯತ್ವ ಸಂಖ್ಯೆ | ಹೆಸರು |
|---|---|---|
| 1 | 35 | ಶ್ರೀ. ಬಿ. ಟಿ. ಶಂಕರ್ ರಾಜೇ ಅರಸ್ |
| 2 | 226 | ಶ್ರೀ. ಎಮ್. ಸಿ. ಚಂದ್ರಶೇಖರ ರಾಜೇ ಅರಸ್ |
| 3 | 304 | ಶ್ರೀ ಬಿ. ಜಿ. ಸತ್ಯಾನಂದ ರಾಜೇ ಅರಸ್ |
| 4 | 514 | ಶ್ರೀಮತಿ. ಸುವೇದಿನಿ ರಾಣಿ ಅರಸ್. ಟಿ. ಸಿ |
| 5 | 691 | ಶ್ರೀ ಬಿ.ಸಿ. ವಿದ್ಯಾಧರ |
| 6 | 913 | ಶ್ರೀ. ಟಿ. ಸಿ. ಶಂಕರ್ ರಾಜೇ ಅರಸ್ |
| 6 | 926 | ಶ್ರೀ. ಎಸ್. ರಾಜೇ ಅರಸ್ |
| 7 | 1110 | ಶ್ರೀ. ಬಿ. ಆರ್. ಶ್ರೀಕಂಠ ರಾಜೇ ಅರಸ್ |
| 8 | 1556 | ಶ್ರೀ. ಟಿ. ಆರ್. ಮಧುಸೂದನ್ ರಾಜೇ ಅರಸ್ |
| 9 | 1088 | ಶ್ರೀಮತಿ ನಿಶ್ಚಿತ ಅರಸ್ |

ಅರಸು ಅಸೋಸಿಯೇಷನ್ ಆಡಳಿತ ಮಂಡಳಿಯ ಗಮನಕ್ಕೆ ಬಂದಿರುವ ಮಾಹಿತಿಯ ಆಧಾರದ ಮೇಲೆ ಈ ಪಟ್ಟಿ ತಯಾರಾಗಿದ್ದು, ಕೆಲವರ ಹೆಸರು ಬಿಟ್ಟು ಹೋಗಿದ್ದಲ್ಲಿ ದಯಮಾಡಿ ಮಾಹಿತಿ ನೀಡಬೇಕಾಗಿ ಈ ಮೂಲಕ ಕೋರುತ್ತೇವೆ.

# ಅರಸು ಅಸೋಸಿಯೇಷನ್ (ರಿ.)

ನಂ. 8, ಡಿ. ದೇವರಾಜೇ ಅರಸು ಭವನ, ಮಿಲ್ಲರ್ ಕೆರೆ, ಜಸ್ಮಾ ದೇವಿ ಭವನ ರಸ್ತೆ,
ವಸಂತನಗರ, ಬೆಂಗಳೂರು–560052

**50ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ**

**ದಿನಾಂಕ 20.10.2024ರ ಭಾನುವಾರ ಬೆಳ್ಳಿಗ್ಗೆ 10.00 ಗಂಟೆಗೆ ಅಸೋಸಿಯೇಷನ್‌ನ ಸಭಾಂಗಣದಲ್ಲಿ ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀ. ಸುಬ್ರಮಣ್ಯ ಎನ್. ಜಿ. ರವರ ಅಧ್ಯಕ್ಷತೆಯಲ್ಲಿ ನಡೆದ 50ನೇ ವಾರ್ಷಿಕ ಮಹಾಸಭೆಯ ನಡಾವಳಿಯ ವರದಿ**

**ಹಾಜರಿದ್ದ ಸದಸ್ಯರು : 51**

**ಅರಸು ಅಸೋಸಿಯೇಷನ್ (ರಿ) ಬೆಂಗಳೂರು ಇದರ 2023–24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ. 20.10.2024 ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಅಸೋಸಿಯೇಷನ್ನಿನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದು 10.00 ಗಂಟೆಗೆ ಕೊರಂ ಇಲ್ಲದೆ ಇದ್ದುದ್ದರಿಂದ ಬೈಲಾ ಪ್ರಕಾರ ಅರ್ಧ ಗಂಟೆ ಮುಂದೂಡಿ ಮತ್ತೇ 10.30 ಗಂಟೆಗೆ ಕರೆದಾಗಲು ಕೊರಂ ಇಲ್ಲದೆ ಇದ್ದುದರಿಂದ ಉಪಸ್ಥಿತರಿದ್ದ ಸದಸ್ಯರ ಒಪ್ಪಿಗೆ ಮೇರೆಗೆ ಅರ್ಧ ಗಂಟೆ ಮುಂದೂಡಿ 11.00 ಗಂಟೆಗೆ ಸಭೆ ಯನ್ನು ಪ್ರಾರಂಭಿಸಲಾಯಿತು.**

**1. ಪ್ರಾರ್ಥನೆ ಹಾಗೂ ಸಂಸ್ಥಾನ ಗೀತೆ :**

ಅಸೋಸಿಯೇಷನ್ನಿನ ನಿರ್ದೇಶಕರಾದ ಶ್ರೀಯುತ. ಉದಯ ಭಾಸ್ಕರ್ ಡಿ. ಅರಸುರವರು ಪ್ರಾರ್ಥನೆ ಮತ್ತು ಮಾಜಿ ಗೌ॥ ಕಾರ್ಯದರ್ಶಿಗಳಾದ ಶ್ರೀ. ಪಿ. ವಿ. ಕೃಷ್ಣೆ ಅರಸು, ಸದ್ಯಸರಾದ ಶ್ರೀ. ಬಿ. ಶ್ರೀಕಂಠ ಚೆನ್ನರಾಜೇ ಅರಸು ಮತ್ತು ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀ. ಸುಬ್ರಮಣ್ಯ ಎನ್. ಜಿ ರವರುಗಳು ಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನೆರದ್ದಿದ್ದ ಸದಸ್ಯರೆಲ್ಲರೂ ಸೇರಿ ಸಂಸ್ಥಾನ ಗೀತೆಯನ್ನು ಹಾಡಿದರು.

**2 ಸ್ವಾಗತ ಭಾಷಣ :**

ಅಸೋಸಿಯೇಷನ್‌ನ ಉಪಾಧ್ಯಕ್ಷರಾದ ಶ್ರೀ. ಕೆ. ವಿ. ವಿಲಾಸ್ ಅರಸುರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ. ಸುಬ್ರಮಣ್ಯ ಎನ್. ಜಿ ಯವರನ್ನು ಸ್ವಾಗತಿಸಿದರು. ಹಾಗೂ ಉಪಸ್ಥಿತರಿದ್ದಂತಹ ಎಲ್ಲಾ ನಿರ್ದೇಶಕರುಗಳನ್ನು ಮತ್ತು ಸದಸ್ಯರುಗಳಿಗೆ ಸ್ವಾಗತ ಕೋರಿದರು.

**3) ಶ್ರದ್ಧಾಂಜಲಿ :**

2023 ನೇ ಸಾಲಿನಲ್ಲಿ ಹಾಗೂ ಸೆಪ್ಟೆಂಬರ್ 2024 ಮಾಹೆಯ ತನಕ ಅಗಲಿದ ಸದ್ಯಸರುಗಳಿಗೆ ಎರಡು ನಿಮಿಷ ಮೌನವನ್ನು ಆಚರಿಸುವ ಮೂಲಕ ಗೌರವ ಸಮರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ. ಜಯದೇವ ರಾಜೇ ಅರಸು ರವರು ಅಗಲಿದ ಸದಸ್ಯರ ಪಟ್ಟಿಯಲ್ಲಿ ಹೆಚ್. ಜಿ. ಲಿಂಗರಾಜೇ ಅರಸುರವರ ಹೆಸರು ಎರಡು ಸಲ ಮುದ್ರಣವಾಗಿದೆ ಎಂದು ಹೇಳಿದರು ಹಾಗೂ ಶ್ರೀ. ರವಿ ಯವರು ಮಾತನಾಡಿ ಶ್ರೀ. ಜಯಶಂಕರ್ ರವರ ಹೆಸರು ಹೆಚ್. ಎಸ್. ಮಲ್ಲರಾಜೇ ಅರಸು ಎಂದು ತಿದ್ದುಪಡಿ ಮಾಡಬೇಕು ಎಂದರು, ಅದನ್ನು ಅಂಗೀಕರಿಸಲಾಯಿತು.

**4. ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರದ ದೃಡೀಕರಣ :**

ಗೌ. ಕಾರ್ಯದರ್ಶಿಗಳಾದ ಡಾ. ಪಂಪಾದೇವಿಯವರು 2023–24ನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿದರು. ಈ ಸಂದರ್ಭದಲ್ಲಿ ಶ್ರೀ. ಜಯದೇವರಾಜೇ ಅರಸುರವರು ಮಾತನಾಡಿ ಸೂಚನಾ ಪತ್ರದಲ್ಲಿ 2022–23ನೇ ಸಾಲಿನಲ್ಲಿ ನೆಡೆದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ನಡಾವಳಿಯ ಮಂಡನೆ ಮತ್ತು ಅನುಮೋದನೆ ಎಂಬ ವಿಷಯ ಬಿಟ್ಟು ಹೋಗಿದ್ದು ಅದನ್ನು ಆ ದಿನದ ಸೂಚನಾಪತ್ರದಲ್ಲಿ ಸೇರಿಸಬೇಕು ಎಂದು ಹೇಳಿದರು. ಅದನ್ನು ಶ್ರೀ. ಭರತ್ ಅರಸುರವರು ಅನುಮೋದಿಸಿದರು. ಸಭಾ ಸದಸ್ಯರ ಒಪ್ಪಿಗೆ ಮೇರೆಗೆ 2022–23ನೇ ಸಾಲಿನಲ್ಲಿ ನೆಡೆದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ನಡಾವಳಿಯ ಮಂಡನೆ ಮತ್ತು ಅನುಮೋದನೆಯನ್ನು ಸೂಚನಾ ಪತ್ರದಲ್ಲಿ ಒಂದು ವಿಷಯವಾಗಿ ಸೇರಿಸಲಾಯಿತು.

**5. 2022–23 ನೇ ಸಾಲಿನಲ್ಲಿ ನೆಡೆದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ನಡಾವಳಿಯ ಮಂಡನೆ ಮತ್ತು ಅನುಮೋದನೆ**

ಪುಸ್ತಕದಲ್ಲಿ ಪ್ರಕಟಿಸಲಾದ ವಿಷಯಗಳ ಬಗ್ಗೆ ಚರ್ಚೆ ಆರಂಭಿಸಲಾಯಿತು.

ಶ್ರೀ, ಜಯದೇವರಾಜೇ ಅರಸು ರವರು ಪುಟ 4 ರಲ್ಲಿ 8.10.2023ನೇ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ನಿಗದಿಯಾಗಿದ್ದು ಸಭೆ ಯನ್ನು 11.00 ಗಂಟೆಗೆ ಕೊರಂನೊಂದಿಗೆ ಪ್ರಾರಂಭಿಸಲಾಯಿತು ಎಂಬುದು ತಪ್ಪು, 10.00 ಗಂಟೆಗೆ ನಿಗದಿಯಾಗಿದ್ದು ಕೊರಂ ಇಲ್ಲದ್ದಿದ್ದರಿಂದ ಬೈಲಾ ಪ್ರಕಾರ ಅರ್ಧ ಗಂಟೆ ಮುಂದೂಡಿ 11.00 ಗಂಟೆಗೆ ಪ್ರಾರಂಭಿಸಲಾಯಿತು ಅಂತ ಬರಬೇಕು ಎಂದರು. ಅದನ್ನು ಒಪ್ಪಿ ಅಂಗೀಕರಿಸಲಾಯಿತು.

ಶ್ರೀ. ಎಮ್.ಸಿ. ಸುರೇಶ ಅರಸು ರವರು ಮಾತನಾಡಿ ಪುಟ 2 ವಿಷಯ 2 ಸ್ವಾಗತ ಭಾಷಣದಲ್ಲಿ ಮೊದಲು ಅಧ್ಯಕ್ಷರನ್ನು ಸ್ವಾಗತಿಸಿದರು ಎಂಬುವುದು ಮೊದಲು ಬರಬೇಕು ನಂತರ ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಸಭೀಕರನ್ನು ಎನ್ನುವುದು ಬರಬೇಕು ಎಂದರು. ಅದನ್ನು ಶ್ರೀ. ಜಯದೇವರಾಜೇ ಅರಸು ರವರು ಅನುಮೋದಿಸಿದರು. ಅದನ್ನು ಅಂಗೀಕರಿಸಲಾಯಿತು.

ಶ್ರೀ. ಜಯದೇವರಾಜೇ ಅರಸು ರವರು ಪುಟ ಸಂಖ್ಯೆ 6 ರಲ್ಲಿ ನಮೂದಿಸಿರುವ ಕೆಲವು ಪದಗಳ ಬಗ್ಗೆ ಆಕ್ಷೇಪನೆ ವ್ಯಕ್ತಪಡಿಸಿದರು. ನಾವುಗಳು ಶ್ರೀ. ಎನ್. ಡಿ. ನಾಗರಾಜೇ ಅರಸು ಮತ್ತು ಶ್ರೀ. ವೈ.ಎಂ. ಕಿರಣ್ ರವರ ಬಳಿ ಮಾತನಾಡಿದ್ದೇವೆ. ನಾವು ಯಾವುದೇ ನಂಬಿಕೆ ನಷ್ಟ, ಕೊಟ್ಟ ಮಾತಿನ ಉಲ್ಲಂಘನೆ ಮಾಡಿಲ್ಲ, ಆ ಪದಗಳನ್ನು ಪುಸ್ತಕದಲ್ಲಿ ನಮೂದಿಸಿರುವುದು ಸಮಂಜಸವಲ್ಲ ಎಂದು ಹೇಳಿದರು. ಹಾಗೂ 0ಅದರ ಬಗ್ಗೆ ಹಿಂದಿನ ಮಹಾಸಭೆಯಲ್ಲಿ ಚರ್ಚೆಯಾಗಿದೆ ಎಂದು ತಿಳಿಸಲಾಯಿತು. ಶ್ರೀ. ಭರತ್ ಎ.ಎಸ್ ರವರು ಆ ಪದಗಳನ್ನು ಪುಸ್ತಕದಲ್ಲಿ ನಮೂದಿಸ ಬೇಡಿ ಎಂದು ಹೇಳಿದರು. ಶ್ರೀ. ಎಮ್. ಸಿ. ಸುರೇಶ ಅರಸು ರವರೂ ಅನುಮೋದಿಸಿದರು. ಅದನ್ನು ಅಂಗೀಕರಿಸಲಾಯಿತು.

ಎಂ. ಸಿ ಸುರೇಶ ಅರಸುರವರು ಮಾತನಾಡಿ ಪುಟ ಸಂಖ್ಯೆ 7 ರಲ್ಲಿ ಮಲ್ಲರಾಜೇ ಅರಸ್ ಎಂಬುವವರು ತುಂಬಾ ಜನ ಇದ್ದು ಅವರ ಇನಿಷಿಯಲ್ ಅನ್ನು ಹಾಕಿ ಎಂದು ಹೇಳಿದರು. ಅದನ್ನು ಅಂಗೀಕರಿಸಲಾಯಿತು.

ಶ್ರೀಯುತ. ಜಯದೇವರಾಜೇ ಅರಸು ರವರು ಪುಟ ಸಂಖ್ಯೆ 8 ರಲ್ಲಿ, ಸಂಶೋಧನಾ ಕೇಂದ್ರ ಸ್ಥಾಪಿಸಲು ಒಪ್ಪಿಗೆ ನೀಡಿದ್ದು ಮೊದಲ ತಿಂಗಳಿಗೆ 1.5ಲಕ್ಷ ಹಾಗೂ ನಂತರ ಪರವಾನಿಗೆ ಶುಲ್ಕ 2023–24 ರವರೆಗೆ ಎಂದು ಇದ್ದು ಅದರ ಬಗ್ಗೆ ಸ್ಪಷ್ಟನೆ ಕೇಳಿದ್ದು ಅದಕ್ಕೆ ಅಧ್ಯಕ್ಷರು ಪರವಾನಿಗೆ ಶುಲ್ಕ ಮೊದಲ ತಿಂಗಳಿಗೆ 1.5 ಲಕ್ಷ ಹಾಗೂ ನಂತರ ಪ್ರತಿ ತಿಂಗಳಿಗೆ 2.25 ಲಕ್ಷ ರೂ ಎಂದು ಸ್ಪಷ್ಟನೆ ನೀಡಿದರು. ಅದನ್ನು ಸಭೆಯು ಒಪ್ಪಿ ಕೊಂಡಿದ್ದರಿಂದ ಅಂಗೀಕರಿಸಲಾಯಿತು.

ಶ್ರೀ. ಪಿ. ವಿ. ಕೃಷ್ಣೆ ಅರಸು ಹಾಗೂ ಜಯದೇವರಾಜೇ ಅರಸುರವರು ಮಾತನಾಡಿ ಹಿಂದಿನ ದಾನಿ ಗಳು ದಾನವನ್ನು ಕೊಡುವಾಗ ಕೆಲವು ಉದ್ದೇಶಗಳಿಗೆ ದಾನವನ್ನು ಕೊಟ್ಟಿರುತ್ತಾರೆ. ಅವರ ಫೋಟೋವನ್ನು ಈಗಿನ ಹಾಲ್‌ನಲ್ಲಿ ಹಾಕಿ ಎಂದು ಹೇಳಿದರು. ಅದಕ್ಕೆ ಅಧ್ಯಕ್ಷರು ಮಾತನಾಡಿ ಕೆಲವು ಫೋಟೋಗಳನ್ನು ಈಗಾಗಲೇ ಹಾಕಲಾಗಿದೆ ಎಂದು ಸ್ಪಷ್ಟ ಪಡಿಸಿದರು.

ಶ್ರೀ. ಭರತ್ ಎ. ಎಸ್. ರವರು ಮಾತನಾಡಿ ಹೊಸ ಸದಸ್ಯತ್ವ ನೀಡುವಾಗ ಮೈಸೂರು ಬೆಂಗಳೂರು ಎಂಬ ಭೇದಭಾವವಿದಯಾ ಎಂದು ಕೇಳಿದರು ಅದಕ್ಕೆ ಆ ರೀತಿ ಯಾವುದೇ

ಭೇದಭಾವವಿಲ್ಲಾ ನಾವು ಬೈಲಾ ಪ್ರಕಾರ ಎಲ್ಲರಿಗೂ ಸದಸ್ಯತ್ವ ಕೊಡುತ್ತಿದ್ದೇವೆ ಎಂದು ಅಧ್ಯಕ್ಷರು ಸ್ಪಷ್ಟ ಪಡಿಸಿದರು. ಹಾಗೂ ಎನ್. ಡಿ. ರಾಜೇ ಅರಸು ರವರು ಮಾತನಾಡಿ ಹಿಂದೆ ಸದಸ್ಯತ್ವಕ್ಕಾಗಿ ಅರ್ಜಿಕೊಟ್ಟಾಗ ಅದನ್ನು ಅಂಗೀಕರಿಸಲು 13 ತಿಂಗಳು ತೆಗೆದುಕೊಂಡಿದ್ದೀರಿ ಅಷ್ಟು ಸಮಯ ಬೇಕಾಗಿಲ್ಲ ಮುಂದೆ ಯಾವುದೇ ಅರ್ಜಿ ಬಂದರೆ ಅದನ್ನು ಅರ್ಜಿ ಬಂದ ಒಂದು ತಿಂಗಳ ಒಳಗೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳಿದರು. ಹಾಗೂ ಶ್ರೀ. ಜಯದೇವ ರಾಜೇ ಅರಸು ರವರು ಮಾತನಾಡಿ ಸದಸ್ಯತ್ವ ಕೊಡುವಾಗ ಸ್ವಲ್ಪ ಮುಕ್ತವಾಗಿ ಕೊಡಿ ಎಂದು ಸಲಹೆ ಮಾಡಿದರು. ಅದಕ್ಕೆ ಅಧ್ಯಕ್ಷರು ಉತ್ತರಿಸುತ್ತಾ ಅರ್ಜಿಗಳನ್ನು ಕ್ರಮಾನುಸಾರ ಪರಿಶೀಲಿಸಿ ಸದಸ್ಯತ್ವವನ್ನು ಅಂಗೀಕರಿಸಲಾಗುತ್ತಿದೆ ಎಂದು ಹೇಳಿದರು.

ಶ್ರೀ. ಎಂ. ಸಿ. ಸುರೇಶ ಅರಸು ರವರು ಮಾತನಾಡಿ ಪುಟ ಸಂಖ್ಯೆ 9 ರಲ್ಲಿ ವಿಷಯ 8, 2022–23 ನೇ ಸಾಲಿನ ಅಡಿಟ್ ಆದ ಲೆಕ್ಕಪತ್ರಗಳ ಮಂಡನೆಯಾಗಿದೆ ಅದರ ಅನುಮೋದನೆಯಾಗಿಲ್ಲ ಎಂದರು. ಅದಕ್ಕೆ ಅಧ್ಯಕ್ಷರು ತಾವು ಕೆಲವು ಲೆಕ್ಕ ಪತ್ರದಲ್ಲಿ ಕೆಲವು ಸ್ಪಷ್ಟನೆ ಕೇಳಿದ್ದು ಅದನ್ನು ತಮಗೆ ಕಳುಹಿಸಲಾಗಿದೆ ಅದನ್ನು ಹೊರತು ಪಡಿಸಿ ಆಡಿಟ್ ಆದ ಲೆಕ್ಕಪತ್ರ ಮಂಡನೆ ಮತ್ತು ಅನುಮೋದನೆಯಾಗಿ ಅದನ್ನು ಅಂಗೀಕರಿಸಲಾಯಿತು ಎಂದು ಸ್ಪಷ್ಟನೆ ನೀಡಿದಾಗ ಸಭೆಯು ಅದನ್ನು ಒಪ್ಪಿ ಅಂಗೀಕರಿಸಿತು.

ಹಾಗೂ ಶ್ರೀ. ಎಮ್. ಸಿ. ಸುರೇಶ ಅರಸುರವರು ಆಡಿಟ್ ರಿಪೋರ್ಟ್ ಖರ್ಚು – ವೆಚ್ಚ, ರಸೀದಿ, ಬ್ಯಾಲೆನ್ಸ್ ಶೀಟ್ ಮತ್ತು ಬಜೆಟ್ ಇವುಗಳ ವಿವರಣೆ ಕನ್ನಡದಲ್ಲಿ ಇರಬೇಕು ಎಂದು ಕಳೆದ ಮಹಾಸಭೆಯಲ್ಲಿ ಒಪ್ಪಿಕೊಳ್ಳಲಾಗಿತ್ತು ಆದರೂ ಈ ಸಲವು ಅವುಗಳು ಕನ್ನಡದಲ್ಲಿ ಮುದ್ರಣವಾಗಿಲ್ಲ ಎಂದರು, ಅದಕ್ಕೆ ಅಧ್ಯಕ್ಷರು ಉತ್ತರಿಸಿ ಈ ಸಲ ಕೆಲವು ಕಾರಣಾಂತರಗಳಿಂದ ಮಾಡಲು ಅಗಲ್ಲಿಲ್ಲ ಮುಂದಿನ ಸಾಲಿನಲ್ಲಿ ಖಂಡಿತವಾಗಿಯೂ ಕನ್ನಡದಲ್ಲಿ ಮುದ್ರಿಸುತ್ತೇವೆ ಎಂದು ಭರವಸೆ ಕೊಟ್ಟರು ಅದನ್ನು ಒಪ್ಪಿ ಅಂಗೀಕರಿಸಲಾಯಿತು.

ಶ್ರೀ. ಎಮ್. ಸಿ. ಸುರೇಶ ಅರಸು ರವರು ಮಾತನಾಡಿ ಪುಟ ಸಂಖ್ಯೆ 10 ರ ವಿಷಯ 14 ರಲ್ಲಿ ಅಧ್ಯಕ್ಷರ ಭಾಷಣವನ್ನು ಸವಿಸ್ತಾರವಾಗಿ ಪ್ರಕಟಿಸಿಎಂದು ಸಲಹೆ ಕೊಟ್ಟರು. ಅದನ್ನು ಒಪ್ಪಿ ಅಂಗೀಕರಿಸಲಾಯಿತು.

ಈ ತಿದ್ದುಪಡಿಯೊಂದಿಗೆ 2022–23 ನೇ ಸಾಲಿನ ವಾರ್ಷಿಕ ಮಹಾಸಭೆಯ ನಡಾವಳಿಯನ್ನು ಅಂಗೀಕರಿಸಲಾಯಿತು.

**6. 2023–24 ನೇ ಸಾಲಿನ ಆಡಳಿತ ಮಂಡಳಿಯ ವರದಿ ಮಂಡನೆ ಮತ್ತು ಅನುಮೋದನೆ.**

ಶ್ರೀ. ಎಮ್. ಸಿ. ಸುರೇಶ ಅರಸು ರವರು ಮಾತನಾಡಿ ಪುಟ ಸಂಖ್ಯೆಯಲ್ಲಿ ರಾಮನವಮಿ ಹಾಗೂ ಸುದರ್ಶನ ಹೋಮದ ಖರ್ಚುಗಳಿಗೆ ರಸೀದಿ ಹಾಕಿದ್ದೀರಾ ಹಾಗೂ ಅದನ್ನು

ಅಕೌಂಟ್ ಸ್ಟೇಟ್ಮೆಂಟ್ನಲ್ಲಿ ತೋರಿಸಿದ್ದಿರಾ ಎಂದು ಕೇಳಿದರು ಅದಕ್ಕೆ ಅಧ್ಯಕ್ಷರು ಉತ್ತರಿಸುತ್ತಾ ನಿರ್ದೇಶಕರುಗಳು ಕೊಟ್ಟಿರು ವಂತದ್ದು ಅದಕ್ಕೆ ರಸೀದಿಯನ್ನು ಹಾಕಿಲ್ಲ ಹಾಗೂ ಲೆಕ್ಕ ಪತ್ರದಲ್ಲೂ ತೋರಿಸಿಲ್ಲ ಎಂದರು ಅದಕ್ಕೆ ಶ್ರೀ. ಎಮ್. ಸಿ. ಸುರೇಶ ಅರಸು ರವರು ನಿರ್ದೇಶಕರು ಕೊಟ್ಟಂತ ಹಣವನ್ನು ಅಸೋಸಿಯೇಷನ್ ಗೆ ಹಾಕಿ ಅಸೋಸಿಯೇಷನ್ ನಿಂದ ಖರ್ಚುಮಾಡಿದರೆ ಅಸೋಸಿಯೇಷನ್ ಗೆ ಒಂದು ಹೆಸರುಬರುತ್ತದೆ ಎಂದರು. ಅದನ್ನು ಒಪ್ಪಿ ಅಂಗೀಕರಿಸಲಾಯಿತು.

ಹಾಗೂ ಶ್ರೀ. ಸತೀಶ್ ಅರಸು ರವರು ಮಾತನಾಡಿ ಉಪಾಕರ್ಮ ಕಾರ್ಯಕ್ರಮದಲ್ಲಿ ಬಂದವರಿಂದ ದೇಣಿಗೆ ಪಡೆದುಕೊಳ್ಳಿ ಎಂದು ಸಲಹೆ ಮಾಡಿದರು. ಅದಕ್ಕೆ ಶ್ರೀ. ಎಮ್. ಸಿ. ಸುರೇಶ ಅರಸು ರವರು ಆ ರೀತಿ ಮಾಡಬೇಡಿ. ಉಪಾಕರ್ಮಕ್ಕೆ ತಗಲುವ ಸಂಪೂರ್ಣ ವೆಚ್ಚವನ್ನು ಈಗ ಮಾಡುತ್ತಿರುವಂತೆ ಮುಂದುವರಿಯಲಿ ಎಂದರು. ಸ್ವಯಂ ಪ್ರೇರಣೆಯಿಂದ ನೀಡಲಾಗುವ ದೇಣಿಗೆಯನ್ನು ಅಸೋಸಿಯೇಷನ್ ಸ್ವೀಕರಿಸುತ್ತದೆ ಎಂದು ಅಧ್ಯಕ್ಷರು ಸೃಷ್ಟಿಗೆ ನೀಡಿದರು.ಅದಕ್ಕೆ ಸಭೆಯು ಸಹಾ ಅನುಮೋದನೆ ಮಾಡಿತು.

ಶ್ರೀ. ಎಮ್. ಸಿ. ಸುರೇಶ ಅರಸು ರವರು ಮಾತನಾಡಿ ಪುಟ ಸಂಖ್ಯೆ 17 ವಿಷಯ 5(ಅ) ರಲ್ಲಿ ಡಿ. ದೇವರಾಜೇ ಅರಸು ಎಂದು ಬಂದಿದೆ. ಪುಸ್ತಕದ ಬೇರೆ ಪುಟಗಳಲ್ಲಿ ಡಿ. ದೇವರಾಜೇ ಅರಸು ಅಂತ ಬಂದಿರುವ ಕಡೆ ತಾವು ಡಿ. ದೇವರಾಜ ಅರಸು ಎಂದು ತಿದ್ದುಪಡಿ ಮಾಡಿದ್ದು, ಡಿ. ದೇವರಾಜೇ ಅರಸು ಹಾಗೂ ಡಿ. ದೇವರಾಜ ಅರಸು ಎರಡರಲ್ಲಿ ಯಾವುದು ಸರಿಯಾದುದು ಎಂದು ಕೇಳಿದರು. ಅದಕ್ಕೆ ಡಾ. ಪಂಪಾದೇವಿಯವರು ಉತ್ತರಿಸಿ ಸರ್ಕಾರದ ದಾಖಲೆ ಪ್ರಕಾರ ಅವರ ಹೆಸರು ಡಿ. ದೇವರಾಜ ಅರಸು ಎಂದು ಸ್ಪಷ್ಟಪಡಿಸಿದರು. ಅದನ್ನು ಅಂಗೀಕರಿಸಲಾಯಿತು.

ಶ್ರೀ. ಜಯದೇವರಾಜೇ ಅರಸು ರವರು ಮಾತನಾಡಿ ಪುಟ ಸಂಖ್ಯೆ 18 ರಲ್ಲಿ ಪ್ರತಿಭಾ ಪುರಸ್ಕಾರವನ್ನು ಹಿಂದಿನ ಆಡಳಿತ ಮಂಡಳಿಯವರು ಸ್ಥಗಿತ ಮಾಡಿರುವುದಿಲ್ಲ, ಕೋವಿಡ್–19 ರ ಕಾರಣ 2020ರಲ್ಲಿ ನೀಡಿರಲಿಲ್ಲ 2021ರಲ್ಲಿ ಎರಡು ವರ್ಷದ್ದು ಸೇರಿಸಿ ಕೊಡಲಾಗಿದೆ ಹಾಗೂ ಆ ದಿನ ಬೆಳಿಗ್ಗೆಯಿಂದಲೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಲಾಗುತ್ತಿತ್ತು ಆದುದರಿಂದ ಸ್ಥಗಿತ ಎಂಬ ಪದ ಅಲ್ಲಿ ಸಮಂಜಸವಲ್ಲಾ ಎಂದು ಹೇಳಿದರು. ಶ್ರೀ. ಭರತ್ ಎ.ಎಸ್. ಮಾತನಾಡುತ್ತಾ 2022ರಲ್ಲಿ ಅಧಿಕಾರ ಹಸ್ತಾಂತರ ಹಾಗೂ ಹಣಕಾಸಿನ ತೊಂದರೆಯಿಂದ ಕೊಡಲಾಗಲ್ಲಿಲ್ಲ ಎಂದು ನಮೂದಿಸಿ ಎಂದು ಸಲಹೆ ಕೊಟ್ಟರು. ಅದನ್ನು ಅಂಗೀಕರಿಸಲಾಯಿತು.

ಶ್ರೀ.ಪಿ. ವಿ. ಕೃಷ್ಣ ಅರಸು ರವರು ಮಾತನಾಡುತ್ತಾ ಸ್ಕಾಲರ್ಷಿಪ್‌ಗೆ ಅರ್ಜಿಗೆ 70% ಬದಲಾಗಿ 60% ಮಾಡಿದರೆ ತುಂಬಾ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು. ಅದಕ್ಕೆ ಶ್ರೀ. ಜಯರಾಜೇ ಅರಸುರವರು ಅಸೋಸಿಯೇಷನ್ ಆರ್ಥಿಕ

ಪರಿಸ್ಥಿತಿಯನ್ನು ನೋಡಿ ಆಡಳಿತ ಮಂಡಳಿಯವರೇ ನಿರ್ಧರಿಸಿ ಎಂದು ಹೇಳಿದರು. ಅದನ್ನು ಅಂಗೀಕರಿಸಲಾಯಿತು.

ಶ್ರೀ. ದೇವರಾಜೇ ಅರಸು ರವರು ಮಾತನಾಡಿ ಪುಟ ಸಂಖ್ಯೆ 19 ವಿಷಯ (9) ರಲ್ಲಿ ಶ್ರೀ. ನಿತ್ಯಾ ಅರಸುರವರ ಕುಟುಂಬಕ್ಕೆ ನಿರ್ದೇಶಕರುಗಳು ಹಾಗೂ ಸದಸ್ಯರು ಮಾಡಿದ ಸಹಾಯವನ್ನು ಶ್ಲಾಘಿಸಿದರು.

ಶ್ರೀ. ಜಿ. ಎಲ್. ಮಲ್ಲರಾಜೇ ಅರಸು ರವರು ಮಾತನಾಡಿ ಪುಟ ಸಂಖ್ಯೆ 20 (10) ಬೈಲಾ ಪುಸ್ತಕಕ್ಕೆ ರೂ. 50/– ನಿಗದಿಪಡಿಸುವುದು ಬೇಡ ಉಚಿತವಾಗಿ ಕೊಡಿ ಅಂತ ಹೇಳಿದರು. ಆದರೆ ಸಭೆಯು ಅದನ್ನು ನಿರಾಕರಿಸಿತು.

ಶ್ರೀ. ಪಿ.ವಿ. ಕೃಷ್ಣ ಅರಸುರವರು ಪುಟ ಸಂಖ್ಯೆ 20 ರಲ್ಲಿ ವಿಷಯ (11) ಮತ್ತು (12) k-cat ರವರಿಂದ ಮುಂಗಡ ಹಣವನ್ನು ಎಷ್ಟು ಪಡೆದಿದ್ದೀರಿ ಹಾಗೂ ಒಪ್ಪಂದಪತ್ರವನ್ನು ಎಷ್ಟು ವರ್ಷಕ್ಕೆ ಮಾಡಿ ಕೊಂಡಿದ್ದೀರೆಂದು ಪ್ರಶ್ನೆ ಮಾಡಿದರು. ಅದಕ್ಕೆ ಅಧ್ಯಕ್ಷರು ರೂ. 9 ಲಕ್ಷವನ್ನು ಮುಂಗಡವಾಗಿ ಕೊಟ್ಟಿರುತ್ತಾರೆ ಹಾಗೂ ಮೂಲತ 11 ತಿಂಗಳಿಗೆ ಮಾಡಿಕೊಂಡಿದ್ದು ಅದು 3 ವರ್ಷದ ಅವಧಿಗೆ ಮುಂದುವರಿಯಲಿದೆ ಎಂದು ಉತ್ತರಿಸಿದರು.

ಹಾಗೇ ಶ್ರೀ. ಪಿ. ವಿ. ಕೃಷ್ಣ ಅರಸು ಮತ್ತು ಶ್ರೀ.ಎನ್.ಡಿ. ರಾಜೇ ಅರಸು ರವರು ಪುಟ ಸಂಖ್ಯೆ 21(13)ರ ಬಗ್ಗೆ ಮಾತನಾಡಿ K-cat ನಿಂದ ಬರುವ ಆದಾಯವನ್ನು ಕ್ರೂಢೀಕರಿಸಿ ಅಸೋಸಿಯೇಷನ್‌ಗಾಗಿ ಯಾವುದಾದರು ಸ್ವಂತ ಜಾಗವನ್ನು ತೆಗೆದುಕೊಳ್ಳಿ, ಈಗ ಇರುವ ಜಾಗ ಲೀಸ್‌ನಲ್ಲಿ ಇದೆ ಅದು ಮುಗಿದ ನಂತರ ಅದನ್ನು ಸರ್ಕಾರಕ್ಕೆ ವಾಪಸ್ಸು ಕೊಡಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಪುಟ ಸಂಖ್ಯೆ 22ರಲ್ಲಿ ಹಳೆಯ ಕಟ್ಟಡವನ್ನು ಲೀಸ್ ಡೀಡ್ ಪ್ರಕಾರ ಬಾಡಿಗೆ ಕೊಡವಂತಿಲ್ಲ ವಾದರಿಂದ ಅದನ್ನು ಅಸೋಸಿಯೇಷನ್ ಗೆ ಆದಾಯ ಬರುವಂತೆ ಯಾವುದಾದರು ಬೇರೆ ರೀತಿಯಲ್ಲಿ ಬಳಸಿಕೊಳ್ಳಿ ಎಂದು ಸಭಾ ಸದಸ್ಯರು ಸಲಹೆ ಮಾಡಿದರು.

ಶ್ರೀ. ಜಯದೇವ ರಾಜೇ ಅರಸು ರವರು ಹೊಸ ಸದಸ್ಯರ ಹೆಸರಿನ ಜೊತೆಗೆ ಅವರ ತಂದೆ ಹಾಗೂ ಊರಿನ ಹೆಸರನ್ನು ನಮೂದಿಸಿ ಎಂದರು. ಹಾಗೇ ಶ್ರೀ. ಭರತ್ ಅರಸು ಮತ್ತು ಶ್ರೀ. ಎಮ್. ಸಿ. ಸುರೇಶ ಅರಸುರವರು ಹೊಸ ಸದ್ಯಸರ ಪಟ್ಟಿಯನ್ನು ಪುಸ್ತಕದಲ್ಲಿ ನಮೂದಿಸುವ ಅವಶ್ಯಕತೆ ಇರುವುದಿಲ್ಲ. ಒಟ್ಟು ಎಷ್ಟು ಜನ ಹೊಸದಾಗಿ ಸದಸ್ಯರಾಗಿದ್ದಾರೆ ಎಂದು ನಮೂದಿಸಿದರೆ ಸಾಕು ಎಂದು ತಿಳಿಸಿದರು. ಅದನ್ನು ಅಂಗೀಕರಿಸಲಾಯಿತು.

ಪುಟ ಸಂಖ್ಯೆ 23 ರಲ್ಲಿ ನಮೂದಿಸಿರುವ ಹಾಜರಾತಿಯಾ ಬಗ್ಗೆ ಸುದೀರ್ಘ ಚರ್ಚೆನಡೆಯಿತು. ಚರ್ಚೆಯಲ್ಲಿ ಶ್ರೀ. ಜಯದೇವ ರಾಜೇ ಅರಸು, ಶ್ರೀ. ಭರತ್ ಎ. ಎಸ್, ಶ್ರೀ. ದೇವರಾಜೇ ಅರಸು, ಶ್ರೀ. ಪಿ. ವಿ. ಕೃಷ್ಣ ಅರಸು, ಎಮ್. ಸಿ. ಸುರೇಶ ಅರಸು, ಶ್ರೀ. ನವೀನ್ ಅರಸು ರವರುಗಳು ಭಾಗಿಯಾಗಿದ್ದಾರು.

ಶ್ರೀ. ಜಯದೇವರಾಜೇ ಅರಸು, ಶ್ರೀ. ಎಮ್. ಸಿ. ಸುರೇಶ ಅರಸು, ಶ್ರೀ ಭರತ್ ಎ. ಎಸ್ ರವರುಗಳು ಮಾತನಾಡಿ ನಿಧನರಾದ ಇಬ್ಬರು ನಿರ್ದೇಶಕರ ಸ್ಥಾನವನ್ನು ತುಂಬಲು ಏನು ಕ್ರಮಕೈಗೊಂಡಿದ್ದೀರಾ ಹಾಗೂ ಇಬ್ಬರು ನಿರ್ದೇಶಕರಾದ ಶ್ರೀ. ಅಶೋಕ್ ಅರಸು ಹಾಗೂ ಶ್ರೀ. ಸುನಿಲ್ ಅರಸು ರವರ ಹಾಜರಾತಿ 3 ಇದೆ ಸದರಿ ಬೈಲಾ ಪ್ರಕಾರ ಅವರ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು. ಬೈಲಾ ಪ್ರಕಾರ ಅವರುಗಳ ಸ್ಥಾನಕ್ಕೆ ಕೋ ಆಪ್ಟ್ ಮಾಡಿಕೊಳ್ಳಬೇಕು ಎಂದರು. ಅದಕ್ಕೆ ಅಧ್ಯಕ್ಷರು ಉತ್ತರಿಸುತ್ತಾ ಬೈಲಾದಲ್ಲಿ ಇರುವ ನಿಯಮ 14ರ ಪ್ರಕಾರ  ಕೋ ಆಪ್ಟ್ ಮಾಡಿಕೊಳ್ಳಬಹುದು ಅಂತ ಇದೆ. ಅದರ ಪ್ರಕಾರ ಕೋ ಆಪ್ಟ ಮಾಡಿಕೊಳ್ಳಬೇಕು ಎನ್ನುವುದು ಕಡ್ಡಾಯವಲ್ಲ ಎಂದರು. ಹಾಗೇ ಹಾಜರಾತಿ ಕಡಿಮೆ ಇರುವ ನಿರ್ದೇಶಕರುಗಳು ಮಾಸಿಕ ಸಭೆಯಲ್ಲಿ ಭಾಗವಹಿಸದೆ ಇದ್ದರು ಅವರುಗಳು ಅಸೋಸಿಯೇಷನ್ ನ ಅಭಿವೃದ್ಧಿಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಆದುದರಿಂದ ಅವರುಗಳ ಸ್ಥಾನಕ್ಕೆ ಕೋ ಆಪ್ಟ್ ಮಾಡಿಕೊಳ್ಳುವುದಿಲ್ಲ ಎಂದರು. ನಿಧನರಾದ ನಿರ್ದೇಶಕರುಗಳ ಸ್ಥಾನವನ್ನು ಭರ್ತಿಮಾಡಬೇಕು ಎಂದರೆ ಕೋ ಆಪರೇಟಿವ್ ಸೊಸೈಟಿ ಕಾಯ್ದೆಯ ಪ್ರಕಾರ ನಾವು ಹಿಂದಿನ ಚುನಾವಣೆಯಲ್ಲಿ ಗೆದ್ದ ಸದಸ್ಯರ ನಂತರದ ಮತ ಪಡೆದವರನ್ನು ಬಿಟ್ಟು ಬೇರೆ  ಅರ್ಹ ಸದಸ್ಯರನ್ನು ಕೋ ಆಪ್ಟ್ ಮಾಡಿಕೊಳ್ಳಲು ಅವಕಾಶ ಕೊಡಿ ಎಂದು ಕೇಳಿದರು.

ಶ್ರೀ ಜಯದೇವರಾಜೇ ಅರಸು ರವರು ಹಾಗೇ ಮಾಡಿದರೆ ಬೈಲಾ ಉಲ್ಲಂಘನೆಯಾಗುತ್ತದೆ ತಾವು ಆ ಸ್ಥಾನಗಳನ್ನು ಭರ್ತಿ ಮಾಡಲೇ ಬೇಕು ಎಂದರು. ಆದರೆ ಶ್ರೀ. ನವೀನ್ ಅರಸುರವರು ಇರುವ ನಿರ್ದೇಶಕರುಗಳೇ ಮುಂದುವರಿಯಲಿ ಯಾವುದೇ ಹೊಸ ನಿರ್ದೇಶಕರುಗಳ ಅವಶ್ಯಕತೆ ಇಲ್ಲ ಎಂದರು. ಆಗ ಶ್ರೀ. ಭರತ್ ಎ. ಎಸ್ ರವರು ಮಾತನಾಡಿ ಈ ಹಿಂದೆಯು ಬೈಲಾ ಉಲ್ಲಂಘನೆಯಾಗಿದೆ. ಹಾಜರಾತಿ ಕಡಿಮೆ ಇರುವ ಸದಸ್ಯರುಗಳು ಅಸೋಸಿಯೇಷನ್ ಅಭಿವೃದ್ಧಿ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದರಿಂದ ಅವರುಗಳ ಸ್ಥಾನವನ್ನು ಬಿಟ್ಟು ನಿಧನರಾದ ನಿರ್ದೇಶಕರುಗಳ ಸ್ಥಾನವನ್ನು ತುಂಬಿ ಎಂದರು. ಮುಂದೆ ಯಾವುದೇ ನಿರ್ದೇಶಕರು ಹಾಜರಾತಿ ಕಡಿಮೆ ಬಂದಲ್ಲಿ ಅವರ ವಿರುದ್ದ ಶಿಸ್ತು ಕ್ರಮಕೈಗೊಳ್ಳಿ ಎಂದರು.ಇದಕ್ಕೆ ಎಮ್. ಸಿ ಸುರೇಶ ಅರಸು, ಶ್ರೀ. ರವಿ ಅರಸು, ಶ್ರೀ. ದೇವರಾಜೇ ಅರಸು, ಶ್ರೀ. ಸಿದ್ದರಾಜೇ ಅರಸು, ಶ್ರೀ ಎನ್. ಡಿ ರಾಜೇ ಅರಸು ರವರು ಅನುಮೋದಿಸಿ ಮುಂದಿನ ಮಾಸಿಕ ಸಭೆಯಲ್ಲಿ ಆಡಳಿತ ಮಂಡಳಿ ಸದಸ್ಯರು ನಿರ್ಣಯಕೈಗೊಳ್ಳಿ ಎಂದರು. ಅದನ್ನು ಅಂಗೀಕರಿಸಲಾಯಿತು.

ಈ ಮೇಲಿನ ತೀರ್ಮಾನದಂತೆ 2023–24 ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸಲಾಯಿತು.

**7) 2023–24 ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ಮಂಡನೆ ಮತ್ತು ಅನುಮೋದ/ನೆ :**

ತೀರ್ಮಾನ : ಆಡಿಟ್ ರಿಪೋರ್ಟ್, ಖರ್ಚು ವೆಚ್ಚಗಳ ರಸೀದಿ, ಬ್ಯಾಲೆನ್ಸ್ ಶೀಟ್ ಪತ್ರವನ್ನು ಅಧ್ಯಕ್ಷರು ಸಭೆಯ ಅನುಮೋದನೆಗಾಗಿ ಮಂಡನೆ ಮಾಡಿದರು . ಚರ್ಚೆಯ ನಂತರ ಅದನ್ನು ಅಂಗೀಕರಿಸಲಾಯಿತು.

**8. 2024–25ನೇ ಸಾಲಿಗೆ ಮುಂಗಡ ಪತ್ರದ ಮಂಡನೆ ಮತ್ತು ಅನುಮೋದನೆ:**

ಅಧ್ಯಕ್ಷರು 2024–25 ನೇ ಸಾಲಿನ ಪುಟ ಸಂಖ್ಯೆ 32ರಲ್ಲಿ ನಮೂದಿಸಿರುವ ಮುಂಗಡ ಪತ್ರವನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದರು.

ಮುಂಗಡ ಪತ್ರದಲ್ಲಿ ಕ್ರಮ ಸಂಖ್ಯೆ 1ರಲ್ಲಿ ಸಂಬಳಕ್ಕೆ ನಮೂದಿಸಿರುವ ರೂ.1,50,000/– ಕಡಿಮೆಯಾಯಿತು ಅದನ್ನು ರೂ. 2,00,000/– ಮಾಡಿ ಎಂದು ಶ್ರೀ. ಭರತ್ ಎ. ಎಸ್ ಹಾಗೂ ಶ್ರೀ. ಎಮ್. ಸಿ. ಸುರೇಶ್ ರವರು ಸೂಚಿಸಿದರು. ಅದನ್ನು ಸಭೆಯು ಒಮ್ಮತದಿಂದ ಅಂಗೀಕರಿಸಿತು. ಹಾಗೇ ಅಸೋಸಿಯೇಷನ್‌ನ ಸುವರ್ಣ ಜಯಂತಿಗೆ ಯಾಕೆ ಯಾವ ಹಣವನ್ನು ಕಾಯ್ದಿರಿಸಿಲ್ಲ ಹಾಗೂ ಹಿಂದೆ ನಡೆಯುತ್ತಿದ್ದಂತೆ ವಾರ್ಷಿಕ ಮಹಾಸಭೆಯ ದಿನ ಕ್ರೀಡಾಚಟುವಟಿಕೆಗಳನ್ನು ಮಾಡಿಲ್ಲ ಎಂದು ಪ್ರಶ್ನಿಸಿತು. ಅದಕ್ಕೆ ಉಪಾಧ್ಯಕ್ಷರು ಸುವರ್ಣ ಜಯಂತಿಗೆ ಇನ್ನು ರೂಪುರೇಷೆಗಳು ಸಿದ್ದವಾಗಿಲ್ಲ ಹಾಗೂ ಸದ್ಯಸರುಗಳಿಗೆ ಒಳಾಂಗಣ ಕ್ರೀಡೆಯನ್ನು ಆಯೋಜಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಸಭೆಯು ಸುವರ್ಣ ಜಯಂತಿ ಕಾರ್ಯಕ್ರಮಕ್ಕೆ ರೂ. 10 ಲಕ್ಷವನ್ನು ವಿನಿಯೋಗಿಸಲು ಅಂಗೀಕಾರ ನೀಡಿತು.

ಈ ಸುದೀರ್ಘ ಚರ್ಚೆಗಳೊಂದಿಗೆ 2024–25 ನೇ ಸಾಲಿನ ಮುಂಗಡ ಆಯವ್ಯಯ ಪತ್ರವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**9) 2024–25 ನೇ ಸಾಲಿಗೆ ಲೆಕ್ಕಪರಿಶೋಧನೆಗೆ ಲೆಕ್ಕ ಪರಿಶೋಧಕರನ್ನು ಮರು ನೇಮಕ ಮಾಡಿಕೊಳ್ಳುವ ಕುರಿತು ಅನುಮೋದನೆ:**

ಅಸೋಸಿಯೇಷನ್ ನ ಲೆಕ್ಕಪರಿಶೋಧಕರಾದ ಶ್ರೀ. ರಘುನಂದನ್ ಎಲ್. ಎ ರವರನ್ನು ಮರುನೇಮಕ ಮಾಡಿಕೊಳ್ಳುವ ಬಗ್ಗೆ ಸಭೆಯ ಅನುಮೋದನೆ ಪಡೆಯಲಾಯಿತು.

**10) ಅಸೋಸಿಯೇಷನ್ ಆರ್ಥಿಕ ಸುಧಾರಣೆ ಮತ್ತು ಅಭಿವೃದ್ಧಿ ಬಗ್ಗೆ:**

ಗೌ.ಕಾರ್ಯದರ್ಶಿಯವರು ಅಸೋಸಿಯೇಷನ್ ನನ್ನು ಆರ್ಥಿಕವಾಗಿ ಬೆಳೆಸಲು ಸದಸ್ಯರುಗಳು ತಮ್ಮ ಕೈ ಜೋಡಿಸ ಬೇಕೆಂದು ಕೇಳಿಕೊಂಡರು.

**11) ಸದಸ್ಯರಿಂದ ಬಂದ ಪತ್ರಗಳ ಮಂಡನೆ :**

ಶ್ರೀ. ಉದಯ ಕುಮಾರ ರವರಿಂದ ದಿನಾಂಕ 16.10.24 ರಂದು ಪತ್ರ ಬಂದಿದ್ದು ಅವರು ಅಧ್ಯಕ್ಷರು, ಉಪಾಧ್ಯಕ್ಷರು, ಖಚಾಂಚಿ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿಗಳ ಸ್ಥಾನಕ್ಕೆ ಅಭ್ಯರ್ಥಿಗಳನ್ನು ನೇರವಾಗಿ ಸದಸ್ಯರಿಂದ ಚುನಾಹಿತರಾಗುವಂತೆ ಚುನಾವಣೆಯನ್ನು ಮಾಡಬೇಕು ಎಂದು ತಿಳಿಸಿದ್ದರು. ಆ ಪತ್ರವನ್ನು ಸಭೆಯಲ್ಲಿ ಗೌ. ಕಾರ್ಯದರ್ಶಿಗಳು ಮಂಡಿಸಿದಾಗ, ಸಭೆಯು ಹಾಗೇನಾದರೂ ಆದರೆ ಆ ಸ್ಥಾನಕ್ಕೆ ಗೆದ್ದ ಅಭ್ಯರ್ಥಿ ಸರ್ವಾಧಿಕಾರಿಯಾಗಬಹುದು ಎಂದು ಹೇಳುತ್ತಾ ಪತ್ರದ ವಿಷಯವನ್ನು ಅಸಮ್ಮತಿಸಿತು.

**12). ಅಧ್ಯಕ್ಷರ ಅನುಮತಿಯಮೇರೆಗೆ ಬರಬಹುದಾದ ಇತರೆ ವಿಷಯಗಳು:**

ಅಧ್ಯಕ್ಷರ ಅನುಮತಿಯ ಮೇರೆಗೆ ಯಾವುದೇ ವಿಷಯವು ಚರ್ಚೆಯಾಗಲ್ಲಿಲ್ಲ.

**13. ಅಧ್ಯಕ್ಷರ ಭಾಷಣ :**

ಅಧ್ಯಕ್ಷರು ತಮ್ಮ ಭಾಷಣದ ಮುಖೇನ ನಮ್ಮ ನಮ್ಮ ಸಂಘದ ಉದ್ದೇಶಗಳನ್ನು ಮುನ್ನಡೆಯಲು ಸದಸ್ಯರುಗಳು ನೀಡಿದಂತಹ ಬೆಂಬಲ ಹಾಗೂ ಸಹಕಾರಕ್ಕೆ ತಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.

ಮುಂದುವರೆದು ನಮ್ಮ ಅಸೋಸಿಯೇಷನ್ ಬರಿ ಸಂಸ್ಥೆಯಾಗಿರದೆ ಮೌಲ್ಯಗಳು, ಬೆಳವಣಿಗೆಯ ಆಸೆ ಮತ್ತು ಅರ್ಥಪೂರ್ಣ ಪ್ರಭಾವ ಬೀರುವ ಸಂಕಲ್ಪವನ್ನು ಒಳಗೊಂಡ ಸಮುದಾಯವಾಗಿದೆ. ಹಾಗೂ ಅಸೋಸಿಯೇಷನ್ ಮುನ್ನಡೆಯುತ್ತಿರುವ ದಾರಿಯ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು.

ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಬದಲಾವಣೆಗಳು, ಸವಾಲುಗಳನ್ನು ತರುತ್ತವೆ. ಆದರೆ ಅದೇ ಸಂದರ್ಭದಲ್ಲಿ ಹೊಸ ಅವಕಾಶಗಳನ್ನು ನೀಡುತ್ತವೆ. ನಾವುಗಳು ಹೊಂದಿಕೆ ಸಾದಿಸುವ, ಅಭಿವೃದ್ಧಿಯಾಗುವ ಮತ್ತು ಪರಸ್ಪರ ಸಂಪರ್ಕದಲ್ಲಿ ಇರಲು ಸಾಮರ್ಥ್ಯ ಹೊಂದಿದ್ದರೆ ಪ್ರಗತಿ ಸಾದಿಸಲು ಸಾಧ್ಯವಾಗುತ್ತದೆ. ನಮ್ಮಂತಹ ಸಂಘಗಳು ಸಮೂಹ ಪ್ರಗತಿ ಯನ್ನು ಸಾಧ್ಯವಾಗಿಸುತ್ತಿದೆ.

ಹಾಗೂ ಕಳೆದ ವರ್ಷವನ್ನು ಹಿಂದು ಮುಂದು ಮಾಡಿ ನೋಡಿದಾಗ ಸಂಘವು ಸಾಕಷ್ಟು ಮಹತ್ವದ ಮೈಲಿಗಲ್ಲುಗಳನ್ನು ತಲುಪಿದೆ ಎಂದು ಹೇಳಿದರು.

ಅಸೋಸಿಯೇಷನ್ ಹಳೆ ಕಟ್ಟಡದಲ್ಲಿ ನೆಡೆಸುತ್ತಿದ್ದ ಜಿಮ್‌ಅನ್ನು ಖಾಲಿ ಮಾಡಿಸಲು ಮಾಡಿದ ಪರಿಶ್ರಮ ಹಾಗೂ ಯಶಸ್ವಿನ್ನು ಶ್ಲಾಘಿಸಿದರು.

ಸರಕಾರದಿಂದ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾಗಿರುವ ಅನುದಾನವನ್ನು ಪಡೆಯಲು ಶ್ರಮಿಸುತ್ತಿದ್ದು ನಕ್ಷೆ ಮಂಜೂರಾತಿಗೆ ತಾವುಗಳು ಎದರಿಸುತ್ತಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿ ಆ ಸವಾಲುಗಳನ್ನು ಮೆಟ್ಟಿ ಅನುದಾನ ಪಡೆಯಲು ಶ್ರಮಿಸುತ್ತೇವೆ ಎಂದು ಹೇಳಿದರು.

ಹಾಗೂ ಅಸೋಸಿಯೇಷನ್ನಿನ ಆವರಣದಲ್ಲಿ ಅಸೋಸಿಯೇಷನ್ನಿನ ಸಹಯೋಗದಲ್ಲಿ ನಡೆಸುತ್ತಿರುವ K-cat ಸಂಸ್ಥೆಯಲ್ಲಿ ಆಸಕ್ತ ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶವನ್ನು ಕಲ್ಪಿಸಿದ್ದು ಈಗಾಗಲೇ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆದಿದ್ದು ಆದರೆ ನಮ್ಮ ಸಮುದಾಯದಿಂದ ಬರೇ ಒಂದು ಅರ್ಜಿ ಬಂದಿರುವುದು ಬಹಳ ಬೇಜಾರಿನ ಸಂಗತಿ ಎಂದು ತಿಳಿಸಿದರು. ಮುಂದಾದರು ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಅರ್ಜಿಸಲ್ಲಿಸುವಂತೆ ಹಾಗೂ ಸದ್ಯಸರುಗಳು ಸಹ ಅರ್ಜಿ ಸಲ್ಲಿಸುವಂತೆ ಪ್ರೋತ್ಸಾಹಿಸಿ ಎಂದು ಕೇಳಿಕೊಂಡರು.

ನಂಜನಗೂಡಿನಲ್ಲಿ ಮಾಡಿದ ಮುಮ್ಮಡಿಯವರ ಉತ್ಸವ, ಕಲಾಸಿಪಾಳ್ಯದಲ್ಲಿ ಮಾಡಿದಂತಹ ಜಯಚಾಮರಾಜೇಂದ್ರ ಒಡೆರ್ಯ ರವರ ಜಯಂತಿ, ಅಸೋಸಿಯೇಷನ್ ಆವರಣದಲ್ಲಿ ಆಚರಿಸುತ್ತಿರುವ ಸಾಮೂಹಿಕ ಉಪಾಕರ್ಮ, ಸತ್ಯನಾರಾಯಣ ಪೂಜೆ, ರಾಮನವಮಿ, ಯೋಗದಿನಾಚರಣೆಯ ಆಚರಣೆಗಳಲ್ಲಿ ಸದ್ಯಸರುಗಳು ಉತ್ಸಹಾದಿಂದ ಭಾಗವಹಿಸುತ್ತಿದ್ದು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಹಕರಿಸಿ ಎಂದು ಹೇಳಿದರು. ಹಾಗೂ ಹೈಫಾ ದಿನಾಚರಣೆಯಲ್ಲಿ ಹಾಗೂ ಹಿಂದುಳಿದ ಆಯೋಗವು ಆಚರಿಸದ ಶ್ರೀ ದೇವರಾಜ ಅರಸು ರವರ ಜಯಂತಿ ಕಾರ್ಯಕ್ರಮಕ್ಕೆ ಭಾಗವಹಿಸಲು ಆಹ್ವಾನ ಬರುತ್ತಿರುವುದು ನಮಗೆ ಹೆಮ್ಮೆ ಎನಿಸುತ್ತಿದೆ ಎಂದು ಹೇಳಿದರು.

ಶ್ರೀ.ಎನ್. ಡಿ ಕೃಷ್ಣಅರಸುರವರಿಗೆ ಕೊಟ್ಟ ಮಾತಿನಂತೆ ರೂ. 5 ಲಕ್ಷ ಹಣವನ್ನು ಮರುಪಾವತಿ ಮಾಡಿದ್ದು, ಅವರ ಇಚ್ಛೆಯಂತೆ ಅದನ್ನು ಠೇವಣಿಮಾಡಿದ್ದೂ, ಅದರ ಬಡ್ಡಿ ಹಣವನ್ನು ಅವರ ಹೆಸರಿನಲ್ಲಿ ವಿದ್ಯಾರ್ಥಿವೇತನ ಕೊಡುತ್ತಿರುವುದಾಗಿ ತಿಳಿಸಿರುತ್ತಾರೆ.

ಹಳೆ ಕಟ್ಟಡದ ಆವರಣವನ್ನು ಬಾಡಿಗೆಗಾಗಿ ವಿಚಾರಿಸುತ್ತಿದ್ದು, ಅಸೋಸಿಯೇಷನ್ನಿನ ಜಾಗವು ಲೀಸ್ನಲ್ಲಿ ಇರುವುದರಿಂದ ಬಾಡಿಗೆ ಕೊಡುವುದಕ್ಕೆ ಕಾನೂನು ತೊಡಕುಗಳು ಇರುತ್ತದೆ. ಅದಕ್ಕಾಗಿ ಅಸೋಸಿಯೇಷನ್ ಈಗಿರುವ ಜಾಗವನ್ನು ಅಸೋಸಿಯೇಷನ್ನಿನ ಸ್ವಂತ ಜಾಗವಾಗಿ ಮಾಡಿಕೊಳ್ಳಬೇಕಾಗುತ್ತದೆ. ಜಾಗದ ಮಾರುಕಟ್ಟೆ ಮೌಲ್ಯವನ್ನು ಕೊಡಲು ಸಾಧ್ಯವಿಲ್ಲದಿರುವುದರಿಂದ ಜಾಗಕ್ಕೆ ತಗಲುವ ನೋಂದಣಿ ಹಾಗೂ ಮುದ್ರಾಂಕ ಶುಲ್ಕವನ್ನು ಸರಕಾರಕ್ಕೆ ಕಟ್ಟಿ ಜಾಗವನ್ನು ಅಸೋಸಿಯೇಷನ್‌ದಾಗಿ ನೋಂದಣಿ ಮಾಡಿಸಿಕೊಳ್ಳವ ಹಾದಿಯನ್ನು ನೋಡಬೇಕು. ಈ ನಿಟ್ಟಿನಲ್ಲಿ ಮಾನ್ಯ ಸದ್ಯಸರುಗಳು ಸಹ ಪ್ರಯತ್ನವನ್ನು ಮಾಡಿ ಎಂದು ಸಭೆಗೆ ತಿಳಿಸಿದರು.

ಹಾಗೂ ಕೊನೆಯದಾಗಿ ಅಸೋಸಿಯೇಷನ್ನಿನ ಈ ಎಲ್ಲಾ ಸಾಧನೆಗಳು ಸಹ ನಿರ್ದೇಶಕರುಗಳ ಹಾಗೂ ಸದ್ಯಸರುಗಳ ಸಹಕಾರವಿಲ್ಲದೆ ಸಾಧ್ಯವಾಗುತ್ತಿರಲಿಲ್ಲ. ನಮ್ಮ ಪ್ರಾಮಾಣಿಕ ಪ್ರಯತ್ನ ಮತ್ತು ಧ್ಯೇಯದ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಸದ್ಯಸರುಗಳಿಗೆ ಹೃತ್ಪೂರ್ವಕ ಧನ್ಯವಾದಗಳು ಎಂದು ಹೇಳುತ್ತಾ ತಮ್ಮ ಭಾಷಣವನ್ನು ಮುಗಿಸಿದರು.

**14. ವಂದನಾರ್ಪಣೆ:**

ಗೌ. ಕಾರ್ಯದರ್ಶಿಗಳು ಈ ಮಹಾಸಭೆಯಲ್ಲಿ ಪಾಲ್ಗೊಂಡು ತಮ್ಮ ಅಮೂಲ್ಯ ಸಲಹೆಗಳನ್ನು ಕೊಟ್ಟು ಮಹಾಸಭೆಯನ್ನು ಯಶಸ್ವಿಯಾಗಿ ನಡೆಯಲು ಸಹಕರಿಸಿದ ಸದಸ್ಯರುಗಳಿಗೆ ವಂದನೆಗಳನ್ನು ಅರ್ಪಿಸಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ನಿರ್ದೇಶಕರುಗಳಿಗೆ ತಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿದರು.

ಧ್ವನಿವರ್ಧಕ ವ್ಯವಸ್ಥೆ ಕಲ್ಪಿಸಿದವರಿಗೂ, ಕುರ್ಚಿ ಹಾಗೂ ಊಟದ ಮೇಜುಗಳನ್ನು ವ್ಯವಸ್ಥೆ ಮಾಡಿಕೊಟ್ಟವರಿಗೂ, ಆ ದಿನದ ಊಟದ ವ್ಯವಸ್ಥೆಯನ್ನು ಮಾಡಿಕೊಟ್ಟಂತಹವರಿಗೂ ಅಸೋಸಿಯೇಷನ್ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ಹಾಗೂ ಕಾರ್ಯಕ್ರಮದ ಯಶಸ್ವಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣರದಂತಹ ಎಲ್ಲಾರಿಗೂ ಅಸೋಸಿಯೇಷನ್ ಪರವಾಗಿ ವಂದನೆಗಳನ್ನು ಅರ್ಪಿಸಿದರು.

ಕೊನೆಯದಾಗಿ ನೆರೆದಿದ್ದ ಸದಸ್ಯರುಗಳು ರಾಷ್ಟ್ರಗೀತೆಯನ್ನು ಹಾಡುವ ಮೂಲಕ ಸರ್ವ ಸದಸ್ಯರ ಮಹಾಸಭೆಯನ್ನು ಮುಕ್ತಯಾಗೊಳಿಸಲಾಯಿತು.

**(ಡಾ. ಬಿ. ಪಂಪಾದೇವಿ )**
ಗೌ॥ ಕಾರ್ಯದರ್ಶಿ

**(ಸುಬ್ರಮಣ್ಯ. ಎನ್. ಜಿ)**
**ಅಧ್ಯಕ್ಷರು**

# ಅರಸು ಅಸೋಸಿಯೇಷನ್ (ರಿ.)

**ನಂ. 8, ಡಿ. ದೇವರಾಜೇ ಅರಸು ಭವನ, ಮಿಲ್ಲರ್ ಕೆರೆ, ಜಸ್ಮಾ ದೇವಿ ಭವನ ರಸ್ತೆ,**
**ವಸಂತನಗರ, ಬೆಂಗಳೂರು–560052**

## 2024–25ನೇ ಸಾಲಿನ ಆಡಳಿತ ಮಂಡಳಿಯ ವರದಿ

ಸನ್ಮಾನ್ಯ ಸದಸ್ಯರೇ,

ಕಳೆದ ಸಾಲಿನ ಅಂದರೆ, 2024–25 ರ ವಾರ್ಷಿಕ ಮಹಾಸಭೆಯನ್ನು ಅಸೋಸಿಯೇಷನ್‌ನ ಸಭಾಂಗಣದಲ್ಲಿ ದಿನಾಂಕ 20.10. 2024 ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಆಯೋಜಿಸಲಾಗಿತ್ತು. 2024–25 ನೇ ವರ್ಷಾಂತ್ಯಕ್ಕೆ ಅಸೋಸಿಯೇಷನ್ನಿನ ಒಟ್ಟು ಅಜೀವ ಸದ್ಯಸರುಗಳ ಸಂಖ್ಯೆ 1424 ಆಗಿರುತ್ತದೆ. ಸದರಿ ಸಾಲಿನಲ್ಲಿ ಒಟ್ಟು 18 ಮಂದಿಗೆ ಅಜೀವ ಸದ್ಯಸತ್ವವನ್ನು ಮಂಜೂರು ಮಾಡಲಾಗಿದೆ.

ಅರಸು ಅಸೋಸಿಯೇಷನ್ ಪ್ರತಿ ವರ್ಷದಂತೆ ಈ ಸಾಲಿನಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ಹಬ್ಬವನ್ನು ಅಸೋಸಿಯೇಷನ್ ಆವರಣದಲ್ಲಿ ಆಚರಿಸಲಾಯಿತು. ಇದರೊಂದಿಗೆ ಧಾರ್ಮಿಕ ಹಬ್ಬಗಳು ಹಾಗೂ ಜನಾಂಗದ ಅಸ್ಮಿತೆಗೆ ಕಾರಿಣೀಕರ್ತರಾದ ಹಾಗೂ ತಮ್ಮ ಅಭೂತಪೂರ್ಣ ಕಾರ್ಯದಿಂದ ನಮ್ಮನಾಡಿನ ಏಳಿಗೆಗೆ ಕಾರಣಿಕರ್ತರಾದ ಮೈಸೂರು ಸಂಸ್ಥಾನದ ಕೆಲವು ಮಹಾರಾಜರುಗಳ ಜಯಂತಿ ಹಾಗೂ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು. ಹಾಗೆಯೇ, ಅರಸು ಜನಾಂಗದ ಹಿರಿಮೆಗೆ ಕಾರಣರಾದ ಮತ್ತು ಈ ಕಟ್ಟಡದ ಉಗಮಕ್ಕೆ ಕಾರಣಿಭೂತರಾಗಿರುವ ನಮ್ಮ ನಾಡಿನ ಪ್ರಸಿದ್ದ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ದಿವಂಗತ ಶ್ರೀ ಡಿ. ದೇವರಾಜೇ ಅರಸು ರವರ ಜಯಂತಿ ಹಾಗೂ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು. ಇವೆಲ್ಲದರೊಂದಿಗೆ ಒಂದನೇ ಮಹಾಯುದ್ಧದಲ್ಲಿ ತಮ್ಮ ಸಾಹಸ, ಶೌರ್ಯ ಹಾಗೂ ವೀರತ್ವದ ಪ್ರತಿಕವಾಗಿರುವ **"ಹೈಫಾ"** ಅತ್ಯಂತ ಗೌರವ ಪೂರ್ಣವಾಗಿ ಆಚರಿಸಲಾಯಿತು. ಇವುಗಳೆಲ್ಲದರ ಬಗ್ಗೆ ಹಾಗೂ 2024–25 ರಲ್ಲಿ ಅಸೋಸಿಯೇಷನ್ ನಲ್ಲಿ ಜರುಗಿದ ಪ್ರಮುಖ ಬೆಳವಣಿಗೆಗಳ ಬಗ್ಗೆ ಸಮಗ್ರ ವರದಿಯನ್ನು ಕೆಳಗೆ ನೀಡಲಾಗಿದೆ.

**1. ರಾಷ್ಟ್ರೀಯ ಹಾಗೂ ರಾಜ್ಯ ಹಬ್ಬಗಳ ದಿನಾಚರಣೆ:–**

ಸ್ವತಂತ್ರ ದಿನಾಚರಣೆ, ಗಣರಾಜ್ಯೋತ್ಸವ ಹಾಗೂ ಕನ್ನಡ ರಾಜ್ಯೋತ್ಸವವನ್ನು ಅಸೋಸಿಯೇಷನ್‌ನಲ್ಲಿ ಅಸೋಸಿಯೇಷನ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಬಾವುಟ ಹಾರಿಸಿ, ಸಿಹಿ ಹಂಚುವ ಮೂಲಕ ಆಚರಿಸಲಾಯಿತು.

**2. ಅಂತರ್‌ರಾಷ್ಟ್ರೀಯ ಯೋಗ ದಿನಾಚರಣೆಯ : 21.06.2024**

2015ರಲ್ಲಿ ಭಾರತ ಸರ್ಕಾರವು ಪ್ರತಿ ವರ್ಷ ಜೂನ್ 21 ರಂದು ಅಂತರ್ ರಾಷ್ಟ್ರೀಯ ಯೋಗ ದಿನವಾಗಿ ಆಚರಿಸಲು ನಿಶ್ಚಯಿಸಿ ಅದರಂತೆ ಪ್ರತಿ ವರ್ಷ ಜೂನ್ 21 ರಂದು ಯೋಗ ದಿನವಾಗಿ ಆಚರಿಸುತ್ತಾ ಬಂದಿದ್ದು ಅದರಂತೆ ಅಸೋಸಿಯೇಷನ್ ನಲ್ಲಿ ಕಾರ್ಯಕಾರಿ ಸಮಿತಿಯ ಸದ್ಯಸರು ಹಾಗೂ ಯೋಗ ಪಟುವು ಆದ ಡಾ. ಎಲ್. ದೇವರಾಜೇ ಅರಸು ಅವರ ಉಪಸ್ಥಿತಿಯಲ್ಲಿ ಮೂರನೇ ಬಾರಿಗೆ ಅಸೋಸಿಯೇಷನ್ ವತಿಯಿಂದ ಯೋಗ ದಿನವನ್ನು ಆಚರಿಲಾಯಿತು.

**3. ಧಾರ್ಮಿಕ ಹಬ್ಬಗಳ ಆಚರಣೆ :**

**ಅ) ಶ್ರೀರಾಮ ನವಮಿ ಆಚರಣೆ:– 17.04.2024**

ಅಸೋಸಿಯೇಷನ್ ಕಳೆದ ಮೂರು ವರ್ಷಗಳಿಂದ ಸಾರ್ವಜನಿಕವಾಗಿ ಶ್ರೀರಾಮ ನವಮಿ ಯನ್ನು ಆಚರಿಸುತ್ತಾ ಬಂದಿದ್ದು, ಈ ವರ್ಷವು ಸಹ ಶ್ರೀರಾಮನವಮಿಯನ್ನು ಆಚರಿಸಿದ್ದು, ನಿರ್ದೇಶಕರುಗಳು, ಅವರ ಕುಟುಂಬ ವರ್ಗದವರು, ಸಿಬ್ಬಂದಿ ವರ್ಗದವರು ಹಾಗೂ ಸದ್ಯಸರುಗಳು ಸೇರಿ ಪಾನಕ, ಮಜ್ಜಿಗೆ ಹಾಗೂ ಕೋಸಂಬರಿ ತಯಾರಿಸಿ, 600 ಜನಕ್ಕೂ ಮೇಲ್ಪಟ್ಟು ಸಾರ್ವಜನಿಕರಿಗೆ ವಿತರಿಸಿ ಅದ್ದೂರಿಯಾಗಿ ಆಚರಿಸಲಾಯಿತು.

ಶ್ರೀರಾಮನವಮಿಗೆ ಆದ ಒಟ್ಟು ವೆಚ್ಚ Rs.15,829/-

**ಆ) ಸಾಮೂಹಿಕ ಋಗ್ವೇದ ಉಪಾಕರ್ಮ : 19.08.2024**

ಅಸೋಸಿಯೇಷನ್ ಆವರಣದಲ್ಲಿ ಅರಸು ಜನಾಂಗದವರಿಗಾಗಿ ಋಗ್ವೇದ ಉಪಾಕರ್ಮವನ್ನು ಆಚರಿಸಲಾಯಿತು. ಜನಾಂಗದ ಕೆಲವು ಸದ್ಯಸರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ನಮ್ಮ ಸಮುದಾಯದವರಿಗಾಗಿ ಆಚರಿಸುತ್ತಿರುವ ಕಾರ್ಯಕ್ರಮ ವಾಗಿರುವುದರಿಂದ ಮುಂದಿನ ವರ್ಷ ಇನ್ನು ಹೆಚ್ಚಿನ ಸದ್ಯಸರು ಭಾಗಿಯಾಗಬೇಕಾಗಿ ಕೋರುತ್ತೇವೆ.

**ಋಗ್ವೇದ ಉಪಾಕರ್ಮಕ್ಕೆ ಆದ ಒಟ್ಟು ವೆಚ್ಚ Rs.14,087/-**

**4. ಮೈಸೂರು ಸಂಸ್ಥಾನದ ಪ್ರಮುಖ ಮಹಾರಾಜರುಗಳ ಸ್ಮರಣೆ :**

ನಮ್ಮ ನಾಡಿನ ಏಳಿಗೆಗೆ ಕಾರಣ ಕರ್ತರಾದ ವಿಶ್ವದಾದ್ಯಂತ ತಮ್ಮ ಕೊಡುಗೆಗಳಿಂದ ಪ್ರಸಿದ್ಧರಾದ ಶ್ರೀಮತಿ ವಾಣಿ ವಿಲಾಸ ಸನ್ನಿದಾನ, ಶ್ರೀ ಜಯಚಾಮರಾಜ ಒಡೆಯರ್ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜಒಡೆಯರ್ ಜಯಂತ್ಯೋತ್ಸವನ್ನು ಅಸೋಸಿಯೇಷನ್ ಆವರಣದಲ್ಲಿರುವ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ 04.07.2024, 18.7.2024 ಹಾಗೂ 4.6.2024 ರಂದು ಆಚರಿಸಲಾಯಿತು ಹಾಗೂ ನಾಲ್ವಡಿ

ಕೃಷ್ಣರಾಜಒಡೆಯರ್ ಜಯಂತ್ಯೋತ್ಸವ ಇದರ ಅಂಗವಾಗಿ ಕರ್ನಾಟಕ ಸರ್ಕಾರವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಸೋಸಿಯೇಷನ್ ವತಿಯಿಂದ ಪಾಲ್ಗೊಳ್ಳಲಾಯಿತು.

**ii) ಮುಮ್ಮಡಿ ಉತ್ಸವ : 14-07-2024:**

ಅಸೋಸಿಯೇಷನ್ ವತಿಯಿಂದ ನಂಜನಗೂಡಿನಲ್ಲಿ ಮುಮ್ಮಡಿ ಉತ್ಸವವನ್ನು 2022 ರಿಂದ ಆಚರಿಸುತ್ತಾ ಬಂದಿದ್ದು, ಈ ವರ್ಷವು ಶ್ರೀ ಶ್ರೀಕಂಠೇಶ್ವರ ಸ್ವಾಮಿಗೆ ಅಭಿಷೇಕ ಹಾಗೂ ದೇವಾಲಯದ ಆವರಣದಲ್ಲಿರುವ ಮುಮ್ಮಡಿಯವರ ವಿಗ್ರಹಕ್ಕೆ ಪೂಜೆ ಸಲ್ಲಿಸಲಾಯಿತು ನಂತರ ಅರಸು ಸಮುದಾಯದ ಕಲ್ಯಾಣಕ್ಕಾಗಿ ಮಹಾ ಮೃತ್ಯುಂಜಯ ಹೋಮವನ್ನು ಆಯೋಜಿಸಲಾಯಿತು. ಹಾಗೂ ದೇವಸ್ಥಾನದವತಿಯಿಂದ ನಡೆಯುವ ಅನ್ನದಾಸೋಹಕ್ಕೆ ಮುಮ್ಮಡಿಯವರ ಹೆಸರಿನಲ್ಲಿ ದೇಣಿಗೆ ನೀಡಲಾಯಿತು ಹಾಗೂ ಅರಸು ಜನಾಂಗದವರಿಗೆ ಪ್ರತ್ಯೇಕವಾಗಿ ಪ್ರಸಾದ ವಿನಿಯೋಗ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 200 ಜನ ಭಾಗವಹಿಸಿದ್ದರು.

ಕಾರ್ಯಕ್ರಮಕ್ಕೆ ಆದ ಒಟ್ಟು ವೆಚ್ಚ 1,21,534/- ರಾಜಮತಾ ಪ್ರಮೋದದೇವಿ ಒಡೆಯರ್ ರೂ. 50,000/- ಹಾಗೂ ಶ್ರೀ ಕೆ. ವಿ. ವಿಲಾಸ್ ಅರಸ್ ರೂ. 1,000/- ದೇಣಿಗೆ ನೀಡಿರುತ್ತಾರೆ.

**5. ಶ್ರೀ ಡಿ. ದೇವರಾಜೇ ಅರಸುರವರ 109ನೇ ಜಯಂತಿ 20.8.2024**

ಅ) ಅಸೋಸಿಯೇಷನ್‌ನಲ್ಲಿ ಡಿ. ದೇವರಾಜೇ ಅರಸು ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಕರ್ನಾಟಕ ಸರ್ಕಾರವು ವಿಧಾನಸೌಧ ಆವರಣದಲ್ಲಿ ಆಚರಿಸಲಾಗುವ ಡಿ. ದೇವರಾಜೇ ಅರಸುರವರ ಜಯಂತಿಯಲ್ಲಿ ಸರ್ಕಾರದ ಅಹ್ವಾನದ ಮೇರೆಗೆ ಭಾಗಿಯಾಗಿ ಡಿ. ದೇವರಾಜೇ ಅರಸು ರವರ ಪುತಳಿಗೆ ಆಡಳಿತ ಮಂಡಳಿಯವರು ಹಾಗೂ ಸಮುದಾಯದ ಸದ್ಯಸರುಗಳು ಸೇರಿ ಮಾಲಾರ್ಪಣೆಮಾಡಿ ಗೌರವ ಸಲ್ಲಿಸಲಾಯಿತು.

**ಆ) ಶ್ರೀ. ಡಿ. ದೇವರಾಜೇ ಅರಸುರವರ 42ನೇ ಪುಣ್ಯತಿಥಿ :-6.6.2024**

ದಿನಾಂಕ 6.6.2024 ರಂದು ಹಿಂದುಳಿದ ವರ್ಗಗಳ ಸಂಘಟನೆಯವರು ಡಿ. ದೇವರಾಜೇ ಅರಸು ಭವನದಲ್ಲಿ ಆಯೋಜಿಸಿದ್ದ ಡಿ. ದೇವರಾಜೇ ಅರಸು ರವರ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಅವರ ಅಹ್ವಾನದ ಮೇರೆಗೆ ನಿರ್ದೇಶಕರುಗಳು ಭಾಗವಹಿಸಿ ಡಿ. ದೇವರಾಜೇ ಅರಸು ರವರಿಗೆ ನುಡಿನಮನ ಸಲ್ಲಿಸಿದರು.

**6. ಹೈಫಾ ದಿನಾಚರಣೆ : 23.9.2024**

ಮೊದಲನೇ ಮಹಾಯುದ್ಧದಲ್ಲಿ ಮೈಸೂರು ಸಂಸ್ಥಾನದಿಂದ Mysore lancer ಎಂಬ ಸೈನ್ಯವು ಹೈದ್ರಾಬಾದ್ ಹಾಗೂ ಜೋದಪುರ ಸೈನೆ ಯೊಂದಿಗೆ ಭಾಗವಹಿಸಿ Israel ದೇಶವು ಸ್ವಾತಂತ್ರ ಪಡೆಯಲು ಹೋರಾಡಿ ಆ ಮಹಾಯುದ್ಧ ದಲ್ಲಿ ವೀರಮರಣ ಹೊಂದಿದ ಸೈನಿಕರ ಶೌರ್ಯ ಪರಂಪರೆಯನ್ನು ಪ್ರತಿಬಿಂಬಿಸುವ ಹೈಫಾ ಕದನದ ವಿಜಯ ದಿವಸದ ದಿನಾಚರಣೆಯಲ್ಲಿ ಆಡಳಿತ ಮಂಡಳಿಯವರು ಹಾಗೂ ಸಮುದಾಯದ ಸದ್ಯಸರು ಭಾಗವಹಿಸಿ ವೀರಮರಣ ಹೊಂದಿದ ಹುತಾತ್ಮರ ಹೆಸರಿರುವ ಯುದ್ದ ಸ್ಮಾರಕವಾದ ವಿಜಯ ಸ್ತಂಭಕ್ಕೆ ಪುಷ್ಪನಮನದ ಮೂಲಕ ಗೌರವ ಸಲ್ಲಿಸಿದರು.

**7. ಮೈಸೂರಿನ ತಾಯಿ ಬೇರು ಶ್ರೀಮತಿ ಕೆಂಪನಂಜಮಣ್ಣಿ ವಾಣಿ ವಿಲಾಸ ಸನ್ನಿದಾನ' ರವರ ಪುಸ್ತಕ ಬಿಡುಗಡೆ ಸಮಾರಂಭ : 07/12/2024**

ಶ್ರೀ. ಜಯಚಾಮರಾಜ ಒಡೆಯರ್ ಟ್ರಸ್ಟ್, ಅರಸು ಮಂಡಳಿ ಸಂಘ, ಮೈಸೂರು ರವರ ಸಹಭಾಗೀತ್ವದಲ್ಲಿ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಶ್ರೀ. ಗಜಾನನ ಶರ್ಮ ರವರು ಬರೆದಂತಹ ಕಾದಂಬರಿ 'ಮೈಸೂರಿನ ತಾಯಿ ಬೇರು ಶ್ರೀಮತಿ ಕೆಂಪನಂಜಮಣ್ಣಿ ವಾಣಿ ವಿಲಾಸ ಸನ್ನಿದಾನ' ರವರ ಪುಸ್ತಕ ಬಿಡುಗಡೆ ಸಮಾರಂಭವನ್ನು ಆಯೋಜಿಸಲಾಯಿತು.

**8. ಸಾಲ ಹಾಗೂ ದೇಣಿಗೆ :-**

ಸನ್ಮಾನ್ಯ ಶ್ರೀ. ಎನ್. ಡಿ.ಕೃಷ್ಣ ಅರಸ್‌ರವರು ನೀಡಿದ್ದ ರೂ. 10 ಲಕ್ಷ ಸಾಲದ ಹಣದಲ್ಲಿ ಈಗಾಗಲೇ ರೂ. 5 ಲಕ್ಷವನ್ನು 31.3.2024 ರಂದು ತೀರುವಳಿ ಮಾಡಿದ್ದು ಉಳಿಕೆ ರೂ. 5 ಲಕ್ಷವನ್ನು ದಿನಾಂಕ 30.3.2025 ರಂದು ಮರು ಪಾವತಿ ಮಾಡಿದ್ದು ಅವರ ಸಲಹೆಯಂತೆ ಒಟ್ಟು ರೂ. 10ಲಕ್ಷವನ್ನು ಅವರ ಹೆಸರಿನಲ್ಲಿ ನಿಶ್ಚಿತ ಠೇವಣಿ ಮಾಡಿ, ಅದರಲ್ಲಿ ಬರುವ ಬಡ್ಡಿಯಿಂದ ನಾಲ್ಕು ವೈದ್ಯಕೀಯ/ ಇಂಜಿನಿಯರ್ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ಸದ್ಯಸರ ಮಕ್ಕಳುಗಳಿಗೆ ವಿದ್ಯಾರ್ಥಿವೇತನವಾಗಿ ನೀಡಲಾಗುತ್ತಿದೆ.

**9. ವಿವಿಧ ಸಮುದಾಯಗಳ ಅಭಿವೃದ್ಧಿ, ಕಾರ್ಯಕ್ರಮದಡಿ ಯಲ್ಲಿ ಸಮುದಾಯ ಭವನ / ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ಬಿಡುಗಡೆ ಮಾಡುವ ಕುರಿತು:-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅರಸು ಸಮುದಾಯದ ಸಮಗ್ರ ಅಭಿವೃದ್ದಿಗೆ ಹಾಲಿ ಶಿಥಿಲವಾಗಿರುವ ಕಟ್ಟಡವನ್ನು ಕೆಡವಿ ಹೊಸದಾಗಿ ಸಮುದಾಯ ಭವನ ಹಾಸ್ಟೆಲ್ ಕೊಠಡಿ ಹಾಗೂ ಕೌಶಲ್ಯ ತರಬೇತಿ ಕೇಂದ್ರ ಇತ್ಯಾದಿಗಳಿಗೆ ಕಟ್ಟಡ ನಿರ್ಮಿಸಲು ಮೇಲಿನ

